# ಬೆಳಗಾವಿ ವಾರ್ತೆ

ಕನ್ನಡ ದಿನ ಪತ್ರಿಕೆ, ಬೆಳಗಾವಿ

ಸಂಪಾದಕರು: ಮಹೇಶ್ವರಿ ಭೀಮಶಿ ಭರಮಣ್ಣವರ
EDITOR: MAHESHWARI BHIMASHI BHARAMANNAVARA

BELAGAVI VARTE
KANNADA DAILY MORNING BELAGAVI

G-mail: belagavivarte1@gmail.com
epaper. belagavivarte.com

Volume: 01 | Issue : 45 | THURSDAY 23-04-2026 | PRGI No : KNKAN/26/A0962 | Pages:4 | Rs.2.00 | M: 9742418836


## ಚಾಮರಾಜನಗರಕ್ಕೆ ಬಂದರೆ ಅಧಿಕಾರ ಹೋಗುತ್ತದೆ ಎನ್ನುವುದು ಮೂಢನಂಬಿಕೆ; ಈ ಮೌಢ್ಯದಲ್ಲಿ ನನಗೆ ನಂಬಿಕೆಯಿಲ್ಲ: ಸಿದ್ದರಾಮಯ್ಯ



ಚಾಮರಾಜನಗರ: 2021ರಲ್ಲಿ ಕೊರೊನಾ ಸೋಂಕಿನ 2ನೇ ಅಲೆಯ ವೇಳೆ ಚಾಮರಾಜನಗರ ಸರ್ಕಾರಿ ಆಸ್ಪತ್ರೆಯಲ್ಲಿ ಆಕ್ಸಿಜನ್ ಕೊರತೆಯಿಂದಾಗಿ ಉಂಟಾದ ದುರಂತದಲ್ಲಿ ಮೃತಪಟ್ಟವರ ಕುಟುಂಬಗಳಿಗೆ ಕೊನೆಗೂ ಸರ್ಕಾರಿ ನೌಕರಿ ಸಿಕ್ಕಿದೆ.

ಮಂಗಳವಾರ ಗುಂಡ್ಲುಪೇಟೆಯಲ್ಲಿ ನಡೆದ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮೃತರ ಕುಟುಂಬ ಸದಸ್ಯರಿಗೆ ಕಾಯಂ ಸರ್ಕಾರಿ ಉದ್ಯೋಗದ ನೇಮಕಾತಿ ಪತ್ರವನ್ನು ಹಸ್ತಾಂತರಿಸಿದರು. ಈ ಮೂಲಕ ಸಂತ್ರಸ್ತ ಕುಟುಂಬಗಳ 5 ವರ್ಷಗಳ ನಿರಂತರ ಹೋರಾಟಕ್ಕೆ ಕೊನೆಗೂ ಪ್ರತಿಫಲ ಸಿಕ್ಕಂತಾಯಿತು.

2021 ಮೇ 2 ರ ರಾತ್ರಿ ಚಾಮರಾಜನಗರ ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ 34 ಮಂದಿ ಕೋವಿಡ್ ರೋಗಿಗಳು ಆಮ್ಲಜನಕದ ಕೊರತೆಯಿಂದಾಗಿ ಮೃತಪಟ್ಟಿದ್ದರು. ಸಂತ್ರಸ್ತ ಕುಟುಂಬದ ಸದಸ್ಯರು ಸೂಕ್ತ ಪರಿಹಾರಕ್ಕೆ ಆಗ್ರಹಿಸಿ ಕಳೆದ 5 ವರ್ಷಗಳಿಂದಲೂ ಹೋರಾಟ ನಡೆಸಿದ್ದರು.

ಬಿಜೆಪಿ ಸರ್ಕಾರದ ನಂತರ ಅಸ್ತಿತ್ವಕ್ಕೆ ಬಂದ ಕಾಂಗ್ರೆಸ್ ಸರ್ಕಾರ ಇವರೆಲ್ಲರಿಗೂ ಸರ್ಕಾರಿ ಹುದ್ದೆ ನೇಮಕಾತಿಯ ಭರವಸೆ ನೀಡಿತ್ತು. ಅದರಂತೆ ಗುಂಡ್ಲುಪೇಟೆಯಲ್ಲಿ ಮಂಗಳವಾರ ನಡೆದ ವಿವಿಧ ಅಭಿವೃದ್ಧಿ ಕಾಮಗಾರಿಗಳ ಚಾಲನೆ ಕಾರ್ಯಕ್ರಮದಲ್ಲಿ ಸಿಎಂ ಸಿದ್ದರಾಮಯ್ಯ, ಆಕ್ಸಿಜನ್ ದುರಂತ ಸಂತ್ರಸ್ತ 25 ಕುಟುಂಬಗಳ ಸದಸ್ಯರಿಗೆ ಕಾಯಂ ಸರ್ಕಾರಿ ಉದ್ಯೋಗ ನೇಮಕಾತಿ ಪತ್ರ ವಿತರಿಸಿದ್ದಾರೆ.

ಭಾರತ್ ಜೋಡೋ ಪಾದಯಾತ್ರೆಯ ಸಂದರ್ಭ ರಾಹುಲ್ ಗಾಂಧಿ ಹಾಗೂ ಡಿ.ಕೆ.ಶಿವಕುಮಾರ್ ಆಕ್ಸಿಜನ್ ದುರಂತದಲ್ಲಿ ಮೃತಪಟ್ಟವರ ಕುಟುಂಬ ಸದಸ್ಯರನ್ನು ಭೇಟಿಮಾಡಿ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದರೆ ಸರ್ಕಾರಿ ಉದ್ಯೋಗ ನೀಡುವ ಭರವಸೆ ನೀಡಿದ್ದರು.

ಚಾಮರಾಜನಗರಕ್ಕೆ ಬಂದರೆ ಅಧಿಕಾರ ಕಳೆದುಕೊಳ್ಳಬೇಕಾಗುತ್ತದೆ ಎನ್ನುವುದು ಒಂದು ಮೌಢ್ಯ. ಇಂತಹ ಮೂಢನಂಬಿಕೆಗಳಲ್ಲಿ ನನಗೆ ನಂಬಿಕೆಯಿಲ್ಲ. ಹಾಗಾಗಿ ಚಾಮರಾಜನಗರಕ್ಕೆ ಸಾಕಷ್ಟು ಬಾರಿ ಭೇಟಿ ನೀಡುತ್ತಿದ್ದೇನೆ. ಇಲ್ಲಿಗೆ ಬಂದರೆ ಕುರ್ಚಿ ಗಟ್ಟಿಯಾಗುತ್ತದೆ ಎಂದು ಪ್ರಾಸಂಗಿಕವಾಗಿ ಹೇಳಿದ್ದೆ ಅಷ್ಟೆ ಎಂದು ಸಿದ್ದರಾಮಯ್ಯ ತಿಳಿಸಿದ್ದಾರೆ.

ಜೆಡಿಎಸ್ ಶಾಸಕ ಶರಣಗೌಡ ಕಂದಕೂರು ಅವರು ಸರ್ಕಾರ ಆಕಸ್ಮಿಕ ಸಾವುಗಳಿಗೆ ನೀಡುವ ಪರಿಹಾರದ ಬಗ್ಗೆ ತಪ್ಪು ಕಲ್ಪನೆಯಿಂದ ಪತ್ರ ಬರೆದಿದ್ದಾರೆ. ಎಲ್ಲರಿಗೂ ಪರಿಹಾರ ನೀಡಲಾಗುತ್ತಿದೆ, ನಮ್ಮ ಗಮನಕ್ಕೆ ಬಂದರೆ ಪರಿಹಾರ ನೀಡುತ್ತೇವೆ. ಶಾಸಕರು ಕೇಳಿದರೂ ಖಂಡಿತ ಕೊಡುತ್ತೇವೆ ಎಂದು ಸಿದ್ದರಾಮಯ್ಯ ವಿಶ್ವಾಸ ವ್ಯಕ್ತ ಪಡಿಸಿದರು.

## 'ಇನ್ನು ಮುಂದೆ ಜೋಕ್ ಮಾಡೋದು ಕಷ್ಟ': ಗೃಹ ಸಚಿವ ಪರಮೇಶ್ವರ ಹೀಗೆ ಹೇಳಿದ್ಯಾಕೆ?

ಬೆಂಗಳೂರು: ಕಬಡ್ಡಿ ಪಂದ್ಯದ ಸಮಯದಲ್ಲಿ 500 ರೂ. ಬೆಟ್ ಕಟ್ಟಿ ಸೋತಿದ್ದೇನೆ ಎಂದು ಹೇಳಿಕೆ ನೀಡಿದ್ದ ಗೃಹ ಸಚಿವ ಜಿ ಪರಮೇಶ್ವರ ಅವರ ವಿರುದ್ಧ ಎಫ್ಐಆರ್ ದಾಖಲಿಸಿ ತನಿಖೆ ನಡೆಸುವಂತೆ ಬೆಂಗಳೂರಿನ 42ನೇ ಎಸಿಜೆಎಂ ನ್ಯಾಯಾಲಯ ಮಂಗಳವಾರ ಆದೇಶ ಹೊರಡಿಸಿದೆ.

ನ್ಯಾಯಾಲಯದ ತಮ್ಮ ವಿರುದ್ಧ ಎಫ್ಐಆರ್ ದಾಖಲಿಸಲು ಆದೇಶಿಸಿದ ಬಗ್ಗೆ ಬುಧವಾರ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಗೃಹ ಸಚಿವ ಜಿ. ಪರಮೇಶ್ವರ ಅವರು, "ಇನ್ನು ಮುಂದೆ ನಾನು ಜೋಕ್ ಮಾಡೋದು ಕಷ್ಟ ಎಂದು ತೋರುತ್ತಿದೆ" ಎಂದರು.

ಪಂದ್ಯದ ಸಮಯದಲ್ಲಿ ನಾನು ಹೇಳಿದ ಮಾತು ಸಾಂದರ್ಭಿಕವಾಗಿತ್ತು ಮತ್ತು ಬೆಟ್ಟಿಂಗ್ ಅನ್ನು ಉತ್ತೇಜಿಸುವ ಯಾವುದೇ ಉದ್ದೇಶವನ್ನು ಹೊಂದಿರಲಿಲ್ಲ ಎಂದು ಸಚಿವರು ಹೇಳಿದರು.

"ಕಬಡ್ಡಿ ಪಂದ್ಯದ ಸಮಯದಲ್ಲಿ ನಾನು ಆಕಸ್ಮಿಕವಾಗಿ ಹಾಗೆ ಹೇಳಿದ್ದೆ. ಹಳ್ಳಿಯಲ್ಲಿ ನಾವು ಕೆಲವೊಮ್ಮೆ ಸಾಂದರ್ಭಿಕವಾಗಿ ಮಾತನಾಡುತ್ತೇವೆ. ಖಂಡಿತ, ಕಾನೂನಿನ ದೃಷ್ಟಿಯಲ್ಲಿ ಅದು ತಪ್ಪು, ಆದರೆ ನಾನು ಅದನ್ನು ಯಾವ ಸಂದರ್ಭದಲ್ಲಿ ಹೇಳಿದ್ದೇನೆ ಎಂಬುದು ಮುಖ್ಯ" ಎಂದು ಪರಮೇಶ್ವರ ಇಂದು ವರದಿಗಾರರಿಗೆ ತಿಳಿಸಿದರು.



"ನಾನು ಆಟದ ಮೇಲೆ ಬೆಟ್ಟಿಂಗ್ ಮಾಡುವಂತೆ ಜನರಿಗೆ ಹೇಳಿದ್ದರೆ ಮತ್ತು ಬೆಟ್ಟಿಂಗ್ ಅನ್ನು ಉತ್ತೇಜಿಸಿದ್ದರೆ, ಅದು ತಪ್ಪು" ಎಂದು ತಮ್ಮ ಹೇಳಿಕೆಯನ್ನು ಸಮರ್ಥಿಸಿಕೊಂಡರು.

"ಆದರೆ ನಾನು ಪ್ರಮುಖ ಹುದ್ದೆಯಲ್ಲಿರುವ ವ್ಯಕ್ತಿಯಾಗಿ ಕಾನೂನುಬಾಹಿರ ಚಟುವಟಿಕೆಗಳನ್ನು ಉತ್ತೇಜಿಸುತ್ತಿದ್ದೇನೆ ಎಂದು ಹೇಳುವುದು ಶುದ್ಧ ಸುಳ್ಳು. ನೀವು ಅದನ್ನು ಹೇಗೆ ಗ್ರಹಿಸುತ್ತೀರಿ ಎಂಬುದರ ಮೇಲೆ ಎಲ್ಲವೂ ಅವಲಂಬಿತವಾಗಿದೆ" ಎಂದರು.

"ನನಗೆ ತಮಾಷೆ ಮಾಡಲು ಸಹ ಅವಕಾಶ ಇಲ್ಲ ಎಂದು ತೋರುತ್ತಿದೆ. ಆದರೆ ನಾನು ಕಾನೂನನ್ನು ಗೌರವಿಸುತ್ತೇನೆ. ಕಾನೂನು ಮತ್ತು ಸುವ್ಯವಸ್ಥೆಯನ್ನು ರಕ್ಷಿಸುವ ಖಾತೆಯನ್ನು ಹೊಂದಿರುವಾಗ ಕಾನೂನನ್ನು ಗೌರವಿಸಬೇಕು" ಎಂದು ಪರಮೇಶ್ವರ ಹೇಳಿದರು.

ನ್ಯಾಯಾಲಯಕ್ಕೆ ಆ ಸಂದರ್ಭವನ್ನು ಏಕೆ ವಿವರಿಸಲು ಸಾಧ್ಯವಾಗಿಲ್ಲ ಎಂದು ವರದಿಗಾರರು ಕೇಳಿದಾಗ, ಗೃಹ ಸಚಿವರು ತಮಗೆ ಯಾವುದೇ ನೋಟಿಸ್ ಬಂದಿಲ್ಲ ಎಂದರು.

"ನನಗೆ ನೋಟಿಸ್ ಬಂದಿದ್ದರೆ ವಿಷಯವನ್ನು ಗಂಭೀರವಾಗಿ ಪರಿಗಣಿಸಬಾರದು ಎಂದು ನಾನು ನ್ಯಾಯಾಲಯಕ್ಕೆ ಮನವಿ ಮಾಡುತ್ತಿದ್ದೆ. ಆದರೆ ಇದ್ದಕ್ಕಿದ್ದಂತೆ, ಎಫ್ಆರ್ಐ ದಾಖಲಿಸುವಂತೆ ಆದೇಶ ನೀಡಲಾಗಿದೆ" ಎಂದರು.

## ಶಿದ್ದಪ್ಪ ಯಲ್ಲಪ್ಪ ಯಡ್ರಾಂವಿ(ಅಳಗವಾಡಿ) ಇವರಿಂದ ಶಕ್ತಿಪ್ರದರ್ಶನ



ಸವದತ್ತಿ ತಾಲೂಕಿನ ಉಗರಗೋಳದಲ್ಲಿ ರವಿವಾರ ಶ್ರೀ ಬಸವೇಶ್ವರ ಜಾತ್ರಾ ಮಹೋತ್ಸವದಲ್ಲಿ ಶಕ್ತಿಪ್ರದರ್ಶನ ಮಾಡಿದ ಕುಮಾರ ಶಿದ್ದಪ್ಪ ಯಲ್ಲಪ್ಪ ಯಡ್ರಾಂವಿ(ಅಳಗವಾಡಿ)ದೀಡ ನಮಸ್ಕಾರ ಹಾಕುತ್ತಿರುವುದು.

**ಬೆಳಗಾವಿ ವಾರ್ತೆ ಉಗರಗೋಳ:** ಸವದತ್ತಿ ತಾಲೂಕಿನ ಉಗರಗೋಳ ಗ್ರಾಮದಲ್ಲಿ ಶ್ರೀ ಬಸವೇಶ್ವರ ಜಾತ್ರಾ ಮಹೋತ್ಸವದಲ್ಲಿ ಅದ್ಭುತ ಶಕ್ತಿಪ್ರದರ್ಶಿಸಿದ ಉಗರಗೋಳ ಗ್ರಾಮದ 21 ವರ್ಷದ ಕುಮಾರ ಶಿದ್ದಪ್ಪ ಯಲ್ಲಪ್ಪ ಯಡ್ರಾಂವಿ(ಅಳಗವಾಡಿ)ಅವರು 108 ಕೆಜಿ ತೂಕದ ಜೋಳದ ಚೀಲವನ್ನು ನಾಲ್ಕು ತಂಬಿಗೆಯ ಮೇಲೆ ನಿಂತು ಯಾರ ಸಹಾಯವಿಲ್ಲದೆಯೇ ಬಸವೇಶ್ವರ ಸರ್ಕಲ್‌ನಿಂದ ದೇವಸ್ಥಾನದ ವರೆಗೆ ದೀಡ ನಮಸ್ಕಾರ ಹಾಕುವುದರ ಮೂಲಕ ಜಾತ್ರೆಗೆ ಮೇರಗು ತಂದು, ನೋಡುಗರನ್ನು ಮಂತ್ರಮುಗ್ಧರನ್ನಾಗಿ ಮಾಡಿದರು.

ಹಿಂದೇ ಜಾತ್ರಗಳಲ್ಲಿ ಕುಸ್ತಿ, ಕಬಡ್ಡಿ, ಶಕ್ತಿ ಪ್ರದರ್ಶನಗಳಂತ ಆಟಗಳು ಮನೊರಂಜನೆಯ ಜೋತೆಗೆ ಸದೃಡ ಶರೀರ ಹೊಂದುವಂತ ಆಟಗಳಿರುತ್ತಿದ್ದವು. ಆದರೆ ಇಂದಿನ ಜಾತ್ರೆಗಳಲ್ಲಿ ಗ್ರಾಮೀಣ ಸೋಗಡನ್ನು ಆನಂದಿಸುವಂತೆ ಯಾವ ಆಟಗಳು ಇಲ್ಲದಿರುವದು ಕಳವಳಕಾರಿ ಸಂಗತಿ ಎಂದು ಶ್ರೀರೇಣುಕಾ ಯಲ್ಲಮ್ಮ ದೇವಸ್ಥಾನ ಅಭಿವೃದ್ಧಿ ಪ್ರಾಧಿಕಾರದ ಸದಸ್ಯ ಶಿದ್ದನಗೌಡ ಗೂಡರಾಶಿ ಹೇಳಿದರು.

ನಶಿಸಿ ಹೊಗುತ್ತಿರುವ ಗ್ರಾಮೀಣ ಕ್ರೀಡೆಗಳು ಹಾಗೂ ಹಳ್ಳಿಯ ಸೋಗಡನ್ನು ಬಿಂಬಿಸುವ ಹಲವಾರು ಆಟಗಳನ್ನು ಯುವ ಪೀಳಿಗೆ ಮುಂದುವರೆಸಿಕೊಂಡು ಹೋಗುವಂತೆ ಕರೆ ನೀಡಿದರು.

ಪತ್ರಿಕೆಯೊಂದಿಗೆ ಮಾತನಾಡಿದ ಕುಮಾರ ಶಿದ್ದಪ್ಪ ಯಲ್ಲಪ್ಪ ಯಡ್ರಾಂವಿ (ಅಳಗವಾಡಿ)ಯುವಕರಲ್ಲಿ ಶಕ್ತಿ ಪ್ರದರ್ಶನಗಳಂತ ಆಟಗಳನ್ನು ಕಲಿಯುವಂತ ಗಟ್ಟಿ ಮನಸ್ಸು ಇರಬೇಕು ಸತತ ಪ್ರಯತ್ನದಿಂದ ಯಶಸನ್ನು ಪಡೆಯಲು ಸಾಧ್ಯ. ದುಷ್ಟ ಚಟಗಳ ದಾಸರಾಗದೆ ವಿಧ್ಯಾ ಸಂಪತ್ತು ಜೋತೆಗೆ ದೇಹ ಸಂಪತ್ತನ್ನು ಗಳಿಸಿ ದೇಶದ ಆಸ್ತಿಯಾಗಬೇಕೆಂದರು.

## ವಿಶ್ವಗುರು ಶ್ರೀ ಬಸವಣ್ಣನವರ ಜಯಂತ್ಯೋತ್ಸವ



**ಬೆಳಗಾವಿ ವಾರ್ತೆ ಹುಬ್ಬಳ್ಳಿ:** ಸಮಾನತೆಯ ಹರಿಕಾರ, ಮಹಾ ಮಾನವತಾವಾದಿ, ಕರ್ನಾಟಕದ ಸಾಂಸ್ಕೃತಿಕ ನಾಯಕ, ವಿಶ್ವಗುರು ಶ್ರೀ ಬಸವಣ್ಣನವರ ಜಯಂತ್ಯೋತ್ಸವದ ಶುಭ ಸಂದರ್ಭದಲ್ಲಿ ಇಂದಿರಾ ಗಾಜಿನ ಮನೆಯಲ್ಲಿರುವ ಜಗಜ್ಯೋತಿ ಬಸವೇಶ್ವರ ಅವರ ಪ್ರತಿಮೆಗೆ ಹೊರಕೇರಿ ಮಾಸ್ತರ ಶಿಕ್ಷಣ ಪ್ರತಿಷ್ಠಾನ, ರಾಣಿಚನ್ನಮ್ಮ ಪರಿಸರ ಸೇವಾ ಸಮಿತಿಯ, ಬಸವ ಪರಿಸರ ಸಂರಕ್ಷಣಾ ಸಮಿತಿಯ ವತಿಯಿಂದ ಮಾಲಾರ್ಪಣೆ ಮಾಡುವ ಮೂಲಕ ಗೌರವ ಅರ್ಪಣೆ ಮಾಡಿ, ಭಕ್ತಿ ಪೂರ್ವಕ ನಮನಗಳನ್ನು ಸಲ್ಲಿಸಲಾಯಿತು ಬಸವಣ್ಣನವರು ಹಲವಾರು ಶರಣರನ್ನು ಸೇರಿಸಿಕೊಂಡು ವಚನ ಸಾಹಿತ್ಯಕ್ಕೆ ನೀಡಿದ ಕೊಡುಗೆಯನ್ನು ಸ್ಮರಿಸಲಾಯಿತು. ವಿಧಾನ ಪರಿಷತ್ ಮಾಜಿ ಸದಸ್ಯರು, ಖ್ಯಾತ ನ್ಯಾಯವಾದಿ ಮೋಹನ್ ಲಿಂಬಿಕಾಯಿ ಅವರು ಮಾತನಾಡಿ ಬಸವಣ್ಣನವರ ಕಾಯಕ, ದಾಸೋಹ, ಸಮಾನತೆ, ಸ್ತ್ರೀ ಸ್ವಾತಂತ್ರ್ಯ , ಮುಂತಾದ ತತ್ವಗಳನ್ನು ಎಲ್ಲರೂ ಪಾಲಿಸಿದರೆ ಸೌಹಾರ್ಧತೆ ಹಾಗೂ ನೆಮ್ಮದಿ ಜೀವನ ನಡೆಸಲು ಸಾಧ್ಯವಾಗುತ್ತದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ವಾಕರಸಾ ನಿಗಮದ ಮಾಜಿ ಅಧ್ಯಕ್ಷ ಸದಾನಂದ ಡಂಗನವರ, ರಾಣಿಚನ್ನಮ್ಮ ಪರಿಸರ ಸೇವಾ ಸಮಿತಿಯ ಅಧ್ಯಕ್ಷ ಪ್ರೊ ಎಸ್.ಎಂ.ಸಾತ್ಮಾರ, ಸೋಹನ್ ಸುರೇಶ್ ಹೊರಕೇರಿ, ರಾಣಿಚನ್ನಮ್ಮ ಪರಿಸರ ಸೇವಾ ಸಮಿತಿಯ ಕಾರ್ಯದರ್ಶಿ, ಬಸವ ಪರಿಸರ ಸಂರಕ್ಷಣಾ ಸಮಿತಿಯ ಕಾರ್ಯದರ್ಶಿ, ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿಯ ಜಿಲ್ಲಾ ಘಟಕದ ಉಪಾಧ್ಯಕ್ಷ, ಕರ್ನಾಟಕ ವಚನ ಸಾಹಿತ್ಯ ಪರಿಷತ್‌ನ ಜಿಲ್ಲಾ ಘಟಕದ ಕಾರ್ಯಾಧ್ಯಕ್ಷ, ಹೊರಕೇರಿ ಮಾಸ್ತರ ಶಿಕ್ಷಣ ಪ್ರತಿಷ್ಠಾನ ಟ್ರಸ್ಟಿ, ಗ್ರಂಥಪಾಲಕ ಡಾ. ಸುರೇಶ ಡಿ. ಹೊರಕೇರಿ, ದುರೀಣರಾದ ಈರಪ್ಪ ಎಮ್ಮಿ, ಚನ್ನಬಸಪ್ಪ ಧಾರವಾಡಶೆಟ್ಟರ, ಮೃತ್ಯುಂಜಯ ಮಟ್ಟಿ, ಪ್ರಭು ಶೆಟ್ಟರ್ , ವಿನಯ್ ಹುಲ್ಲೂರು, ರಮೇಶ್ ಯಾದವಾಡ , ಭಾರತಿ ವಾಲಿ, ನವೀನ್ ಲಿಂಬಿಕಾಯಿ, ಕುಂಬಿ , ಮನೋಹರ್ ಜಮಖಂಡಿ , ಸಂಗಮೇಶ ಐಹೋಳ್ಳಿ, ಮುಂತಾದವರು ಇದ್ದರು. ಗ್ರಂಥಪಾಲಕ ಡಾ. ಸುರೇಶ ಡಿ. ಹೊರಕೇರಿ ಅವರು ಮಾತನಾಡಿ ಬಸವಪ್ರಣೀತ ಲಿಂಗಾಯತ ಧರ್ಮ ಒಂದು ವಿಶ್ವಧರ್ಮ, ಸರ್ವರೂ ಆಚರಿಸಬಹುದಾದ ಸರಳ, ಸಹಜ ಧರ್ಮ. ಕಾಯಕ ದಾಸೋಹದ ಸಹಜ ಪ್ರಧಾನ ಧರ್ಮ. ಏಕ ದೇವೋಪಾಸನೆ, ಧರ್ಮ. ದೇಹವೇ ದೇವಾಲಯವನ್ನಾಗಿ ಮಾಡಿಕೊಂಡು ದೇವರನ್ನು ತನ್ನೋಳಗೆ ಅನುಭವಿಸುವ ಧರ್ಮ. ತನುಶುಚಿ, ಮನಶುಚಿ, ಭಾವಶುಚಿ ಗೊಳ್ಳಬೇಕಾದರೆ ಶರಣರ ತತ್ವಚಿಂತನೆ ಅತ್ಯವಶ್ಯ ಎಂದು ಹೇಳಿದರು.

## ಗ್ರಾಮೀಣ ಪ್ರದೇಶದ ಜಾನಪದವನ್ನೇ ತಮ್ಮ ಉಸಿರಾಗಿಸಿಕೊಂಡ ಆನಂದ ಕಾವ್ಯನಾಮದ ಬೆಟಗೇರಿ ಕೃಷ್ಣಶರ್ಮರು ರಚಿಸಿದ ಸಾಹಿತ್ಯವು ಮನ ಮಿಡಿಯುವ ಜಾನಪದರ ಮೌಲಿಕ ಸಾಹಿತ್ಯವಾಗಿದೆ

**ಬೆಳಗಾವಿ ವಾರ್ತೆ ಗೋಕಾಕ:** ಗ್ರಾಮೀಣ ಪ್ರದೇಶದ ಜಾನಪದವನ್ನೇ ತಮ್ಮ ಉಸಿರಾಗಿಸಿಕೊಂಡ ಆನಂದ ಕಾವ್ಯನಾಮದ ಬೆಟಗೇರಿ ಕೃಷ್ಣಶರ್ಮರು ರಚಿಸಿದ ಸಾಹಿತ್ಯವು ಮನ ಮಿಡಿಯುವ ಜಾನಪದರ ಮೌಲಿಕ ಸಾಹಿತ್ಯವಾಗಿದೆ ಎಂದು ಗೋಕಾಕ ತಾಲೂಕ ದಂಡಾಧಿಕಾರಿ ಡಾ ಮೋಹನ ಭಸ್ಮೆಯವರು ಅಭಿಪ್ರಾಯಿಸಿದರು.

ಆನಂದ ಕಂದರ ಬೆಟಗೇರಿ ಸ್ವಗ್ರಾಮದಲ್ಲಿ ಅವರ 126ನೆಯ ಜಯಂತೋತ್ಸವದಲ್ಲಿ ಮಾತನಾಡಿದ ಭಸ್ಮೆಯವರು ಈ ಹಿರಿಯರ ಸದಾಶಯವನ್ನು ಮುಂದುವರಿಸಿಕೊಂಡಿರುವ ಗೋಕಾಕ ಪರಿಸರದ ಜಾನಪದ ಕವಿ ಕಲಾವಿದ ಈಶ್ವರಚಂದ್ರ ಕೂಡ ಅಭಿನಂದನಾರ್ಹರು.



ಡಾ ಬೆಟಗೇರಿ ಕೃಷ್ಣಶರ್ಮ ಟ್ರಸ್ಟ್, ಬೆಳಗಾವಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯೊಂದಿಗೆ ಸಹಕರಿಸಿದ ಬೆಟಗೇರಿ ಗ್ರಾಮದ ಕರ್ನಾಟಕ ರಕ್ಷಣಾ ವೇದಿಕೆ, ಜಾಗೃತ ವೇದಿಕೆ ಹಾಗೂ ಶ್ರೀ ಸರ್ವೇಶ್ವರ ಪ್ರಸಾದಿತ ಶಿವ-ಕಾಳಿಕಾಂಬ ಸಾಂಸ್ಕೃತಿಕ ಸಂಘಟಣೆಗಳ ಸಂಯುಕ್ತಾಶ್ರಯದಲ್ಲಿ ಸ್ವ-ಗ್ರಾಮ ಬೆಟಗೇರಿಯಲ್ಲಿ ಆಯೋಜಿತವಾದ 126ನೆಯ ಜಯಂತೋತ್ಸವದ ಸಂದರ್ಭದಲ್ಲಿ ಅರಭಾವಿ ಮತಕ್ಷೇತ್ರದ ಜನಪ್ರಿಯ ಶಾಸಕರಾದ ಬಾಲಚಂದ್ರ ಲಕ್ಷ್ಮಣರಾವ್ ಜಾರಕಿಹೊಳಿಯುವರ ಸದಾಶಯದಂತೆ ಕಾರ್ಯಕ್ರಮ ನಡೆದವು.

ಈಶ್ವರಚಂದ್ರ ಬೆಟಗೇರಿ ಅವರ ನಾ ಕಂಡಂತೆ ವಿವೇಕಾನಂದ ಪುಸ್ತಕ ಕುರಿತು ಮಾತನಾಡಿದ ಧಾರವಾಡದ ಪ್ರೊ ಶೋಭಾ ಶಂಕರ್ ಚಂದ್ರಗಿರಿಯವರು ಸುಮಾರು ನೂರಾತೊಂಬತ್ತೆರಡು ಪುಟಗಳಲ್ಲಿ ಲೇಖಕರು ವೈವಿಧ್ಯತೆಯನ್ನು ಮೆರೆದಿರುವರೆಂದರು.

ಜಿ.ಕೆ ಕಾಡೇಶಕುಮಾರ್ ಪ್ರಾರ್ಥನೆಯೊಂದಿಗೆ ಬೆಟಗೇರಿ ಕೃಷ್ಣಶರ್ಮರ ನಲ್ವಾಡುಗಳನ್ನು ಮನದುಂಬಿ ಹಾಡಿ ಜನಮನ ರಂಜಿಸಿದರು.

ಬೆಂಗಳೂರಿನ ಎಂ ಪ್ರಭಾಕರ ಸಾವಯವ ಕೃಷಿಯಲ್ಲಿ ಜಾನಪದ ಕುರಿತಾಗಿ ರೈತರಿಗೆ ಎರೆಹುಳುವಿನ ಮಹತ್ವದ ಅರಿವು ಮೂಡಿಸಿದರು.

ಅಧ್ಯಕ್ಷತೆಯನ್ನು ಗ್ರಾಮದ ಹಿರಿಯರಾದ ಬಸವಂತ ಮಾಯಪ್ಪ ಕೋಣೆಯವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಗೋಕಾಕ್ ತಾಲೂಕ ಪಂಚಾಯತ್ ಕಾರ್ಯ ನಿರ್ವಾಹಕ ಅಧಿಕಾರಿಗಳಾದ ಪರಶುರಾಮ ಗಸ್ತಿ, ಗಣ್ಯ ವರ್ತಕ ಮಹಾಂತೇಶ್ ತಾಂವಶಿ, ಹಿರಿಯರಾದ ನರೇಂದ್ರ ಪುರಂದರೆ, ಸಂಗಯ್ಯ ಹಿರೇಮಠ,ಈರಯ್ಯ ಹಿರೇಮಠ, ಲಕ್ಷ್ಮಣ ನೀಲನ್ನವರ, ಹಿರಿಯ ಸಾಹಿತಿ ಮಹಾಲಿಂಗ ಮಂಗಿ, ಲಕ್ಷ್ಮಣ ಚಂದರಗಿ, ಪ್ರೊ ಮಹದೇವ ಕಂಬಿ, ಬಿ.ಎಂ.ದೇಯನ್ನವರ ನ್ಯಾಯವಾದಿ ಎಂ.ಐ. ನೀಲಣ್ಣವರ, ಡಾ ಅರುಣ್ ಸೌತೆಕಾಯಿ ಕನ್ನಡ ಸಾಹಿತ್ಯ ಪರಿಷತ್ತಿನ ಗೋಕಾಕ್ ತಾಲೂಕ ಅಧ್ಯಕ್ಷ ಭಾರತಿ ಬಿ.ಮದಬಾವಿ ಅವರೊಂದಿಗೆ ಬೆಂಗಳೂರಿನ ಹಿರಿಯರಂಗ ಕಲಾವಿದೆ ಶ್ರೀಮತಿ ಮಾಲತಿಶ್ರೀ ಮೈಸೂರ್ ಉಪಸ್ಥಿತರಿದ್ದು ಮಾತನಾಡಿದರು.

ಕರವೇ ಅಧ್ಯಕ್ಷ ಈರಣ್ಣ ಬಳಿಗಾರ ಸರ್ವರನ್ನು ಸ್ವಾಗತಿಸಿದರು. ಪ್ರಾಚಾರ್ಯ ಜಯಾನಂದ ಮಾದರ ಪ್ರಾಸ್ತಾವಿಕವಾಗಿ ಮಾತನಾಡಿದರು. ಈಶ್ವರಚಂದ್ರ ಬೆಟಗೇರಿ ಅವರ ತಂಡದಿಂದ ರಾಮಾಯಣದ ಸೀತಾ ಲಕ್ಷ್ಮಣ ಸಣ್ಣಾಟ ಪ್ರದರ್ಶನವಾಯಿತು. ಬಸವರಾಜ್ ಈರಪ್ಪ ಪಣದಿ ಕಾರ್ಯಕ್ರಮ ನಿರೂಪಿಸಿದರು. ಭರಮಣ್ಣ ಪೂಜಾರಿ ವಂದಿಸಿದರು.

# ಕರ್ನಾಟಕದ ಸಾಂಸ್ಕೃತಿಕ ನಾಯಕ, ವಿಶ್ವಗುರು ಶ್ರೀ ಬಸವಣ್ಣನವರ ಜಯಂತ್ಯೋತ್ಸವ



**ಬೆಳಗಾವಿ ವಾರ್ತೆ ಹುಬ್ಬಳ್ಳಿ:** ಸಮಾನತೆಯ ಹರಿಕಾರ, ಮಹಾ ಮಾನವತಾವಾದಿ, ಕರ್ನಾಟಕದ ಸಾಂಸ್ಕೃತಿಕ ನಾಯಕ, ವಿಶ್ವಗುರು ಶ್ರೀ ಬಸವಣ್ಣನವರ ಜಯಂತ್ಯೋತ್ಸವದ ಶುಭ ಸಂದರ್ಭದಲ್ಲಿ ಕಲ್ಯಾಣ ನಗರದ ರಂಗಮಂದಿರ ದಲ್ಲಿ ಜಗಜ್ಯೋತಿ ಬಸವೇಶ್ವರ ಅವರ ಭಾವಚಿತ್ರಕ್ಕೆ ಹೊರಕೇರಿ ಮಾಸ್ತರ ಶಿಕ್ಷಣ ಪ್ರತಿಷ್ಠಾನ, ರಾಣಿಚನ್ನಮ್ಮ ಪರಿಸರ ಸೇವಾ ಸಮಿತಿಯ, ಬಸವ ಪರಿಸರ ಸಂರಕ್ಷಣಾ ಸಮಿತಿಯ ವತಿಯಿಂದ ಮಾಲಾರ್ಪಣೆ ಮಾಡುವ ಮೂಲಕ ಗೌರವ ಅರ್ಪಣೆ ಮಾಡಿ, ಭಕ್ತಿ ಪೂರ್ವಕ ನಮನಗಳನ್ನು ಸಲ್ಲಿಸಲಾಯಿತು ಬಸವಣ್ಣನವರು ಅಸಂಖ್ಯಾತ ಶರಣರನ್ನು ಸೇರಿಸಿಕೊಂಡು ವಚನ ಸಾಹಿತ್ಯಕ್ಕೆ ನೀಡಿದ ಕೊಡುಗೆಯನ್ನು ಸ್ಮರಿಸಲಾಯಿತು. ಗಣ್ಯರು ಮಾತನಾಡಿ ಬಸವಣ್ಣನವರ ಕಾಯಕ, ದಾಸೋಹ, ಸಮಾನತೆ, ಸ್ತ್ರೀ ಸ್ವಾತಂತ್ರ್ಯ, ಮುಂತಾದ ಶರಣರ ತತ್ವಗಳನ್ನು ಎಲ್ಲರೂ ಪಾಲಿಸಿದರೆ ಸೌಹಾರ್ಧತೆ ಹಾಗೂ ನೆಮ್ಮದಿ ಜೀವನ ನಡೆಸಲು ಸಾಧ್ಯವಾಗುತ್ತದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಸೋಹನ ಸುರೇಶ ಹೊರಕೇರಿ, ಉದ್ಯಮಿ, ಕೋಳಿವಾಡ ಮಾರ್ಬಲ್ಸ&ಗ್ರಾನೈಟ್ಸ ಮಾಲಿಕರಾದ ಶಂಕರ ಕೋಳಿವಾಡ, ರಾಣಿಚನ್ನಮ್ಮ ಪರಿಸರ ಸೇವಾ ಸಮಿತಿಯ ಕಾರ್ಯದರ್ಶಿ, ಬಸವ ಪರಿಸರ ಸಂರಕ್ಷಣಾ ಸಮಿತಿಯ ಕಾರ್ಯದರ್ಶಿ, ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿಯ ಜಿಲ್ಲಾ ಘಟಕದ ಉಪಾಧ್ಯಕ್ಷ, ಕರ್ನಾಟಕ ವಚನ ಸಾಹಿತ್ಯ ಪರಿಷತ್‌ನ ಜಿಲ್ಲಾ ಘಟಕದ ಕಾರ್ಯಾಧ್ಯಕ್ಷ, ಹೊರಕೇರಿ ಮಾಸ್ತರ ಶಿಕ್ಷಣ ಪ್ರತಿಷ್ಠಾನ ಟ್ರಸ್ಟಿ, ಗ್ರಂಥಪಾಲಕ ಡಾ. ಸುರೇಶ ಡಿ. ಹೊರಕೇರಿ, ಪ್ರೊ ಬಿ ಎಂ ಮೊರಬದ, ಪ್ರೊ ಎಸ್.ಎಂ. ಸಾತ್ಮಾರ್, ಮೃತ್ಯುಂ ಜಯ ಮಟ್ಟಿ , ಚನ್ನಬಸಪ್ಪ ಧಾರ ವಾಡ'ಶೆಟ್ಟರ್, ದಾಕ್ಷಾಯಣಿ ಕೋಳಿವಾಡ, ಭಾರ ತಿ ವಾಲಿ, ಗೀತಾ ದೇಶಳ್ಳಿ , ಸಂಭ್ರಮ, ಸಾಕ್ಷಿ, ಪೂಜಾ, ಗುರುರಾಜ್ ಶಿವಮೊಗ್ಗಿ, ಮುರ ಳೀಧರ ಹೆಗಡೆ, ಅಶೋಕ ಹೊಸ'ಮನಿ, ಸಿದ್ದಪ್ಪ ಬೆಣ್ಣೂರ, ಎಫ್ ಆರ್ ಪಾ ಟೀಲ್, ರವಿ ಮಾಳಗಿ, ಗದಿಗೆಪ್ಪ ಇಟಗಿ, ಮಂಜು, ಪ್ರೀತಮ್, ಮುಂತಾದವರು ಇದ್ದರು.

ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆಯ ಮಾಜಿ ಸಹ-ಕಾರ್ಯದರ್ಶಿ, ಉದ್ಯಮಿ, ಕೋಳಿವಾಡ ಮಾರ್ಬಲ್ಸ & ಗ್ರಾನೈಟ್ಸ ಮಾಲಿಕರಾದ ಶಂಕರ ಕೋಳಿವಾಡ ಹಾಗೂ ದಾಕ್ಷಾಯಿಣಿ ಕೋಳಿವಾಡ ಅವರ ಸುಪುತ್ರ, ಉತ್ತಮ ಬ್ಯಾಡ್ಮಿಂಟನ್ ಆಟಗಾರ ಸಂಭ್ರಮ ಶಂಕರ ಕೋಳಿವಾಡ ಅವರು ಕೆ.ಎಲ್.ಇ ಸಂಸ್ಥೆಯ, ಎಮ್. ಆರ್. ಸಾಖರೆ ಸಿಬಿಎಸ್‌ಇ ಶಾಲೆಯಲ್ಲಿ 10ನೇ ತರಗತಿಯಲ್ಲಿ ಉನ್ನತ ದರ್ಜೆಯಲ್ಲಿ ತೇರ್ಗಡೆಯಾಗಿದ್ದಕ್ಕೆ ಸಂಭ್ರಮ ಶಂಕರ ಕೋಳಿವಾಡ ಅವರಿಗೆ ಹೊರಕೇರಿ ಮಾಸ್ತರ ಶಿಕ್ಷಣ ಪ್ರತಿಷ್ಠಾನ, ರಾಣಿಚನ್ನಮ್ಮ ಪರಿಸರ ಸೇವಾ ಸಮಿತಿಯ, ಬಸವ ಪರಿಸರ ಸಂರಕ್ಷಣಾ ಸಮಿತಿಯ ಪದಾಧಿಕಾರಿಗಳು ಅಭಿಮಾನದಿಂದ ಶಾಲು, ಮಾಲಾರ್ಪಣೆ ಮಾಡಿ ಗೌರವದಿಂದ ಆತ್ಮೀಯವಾಗಿ ಸನ್ಮಾನಿಸಿದರು. ಅಭಿನಂದಿಸಿ, ಮುಂದಿನ ಶೈಕ್ಷಣಿಕ ಜೀವನ ಯಶಸ್ವಿಯಾಗಿ ನೆರವೇರಲಿ ಎಂದು ಶುಭ ಕೋರಿದರು.

ಗ್ರಂಥಪಾಲಕ ಡಾ. ಸುರೇಶ ಡಿ. ಹೊರಕೇರಿ ಅವರು ಮಾತನಾಡಿ ಬಸವಪ್ರಣೀತ ಲಿಂಗಾಯತ ಧರ್ಮ ಒಂದು ವಿಶ್ವಧರ್ಮ, ಸರ್ವರೂ ಆಚರಿಸ ಬಹುದಾದ ಸರಳ, ಸಹಜ ಧರ್ಮ. ಕಾಯಕ ದಾಸೋಹದ ಸಹಜ ಪ್ರಧಾನ ಧರ್ಮ. ಏಕ ದೇವೋಪಾಸನೆಯ ಧರ್ಮ. ದೇಹವೇ ದೇವಾಲಯವನ್ನಾಗಿ ಮಾಡಿಕೊಂಡು ದೇವರನ್ನು ತನ್ನೊಳಗೆ ಅನುಭವಿಸುವ ಧರ್ಮ. ತನುಶುಚಿ, ಮನಶುಚಿ, ಭಾವಶುಚಿ ಗೊಳ್ಳಬೇಕಾದರೆ ಶರಣರ ತತ್ವಚಿಂತನೆ ಅತ್ಯವಶ್ಯ ಎಂದು ಹೇಳಿದರು.

# ಮಹಾಮಾನವತಾವಾದಿ ಸಮಾನತೆಯ ಹರಿಕಾರ ವಿಶ್ವಗುರು ಬಸವಣ್ಣನವರ ಜಯಂತಿ ಆಚರಣೆ



ಗೋಕಾಕ: ಸಕಲ ವಾದ್ಯಗಳೊಂದಿಗೆ ಬಸವೇಶ್ವರರ ಭಾವಚಿತ್ರದ ಮೆರವಣಿಗೆ ಚಿತ್ರ

**ಬೆಳಗಾವಿ ವಾರ್ತೆ ಗೋಕಾಕ:** ಮಹಾಮಾನವತಾವಾಧಿ ಸಮಾನತೆಯ ಹರಿಕಾರ ವಿಶ್ವಗುರು ಬಸವಣ್ಣನವರ ಜಯಂತಿ ನಿಮಿತ್ಯ ಸೋಮವಾರದಂದು ನಗರದ ಕಿಲ್ಲಾದಲ್ಲಿರುವ ಬಸವೇಶ್ವರ ದೇವಸ್ಥಾನದಲ್ಲಿ ಇಲ್ಲಿಯ ಶೂನ್ಯ ಸಂಪಾದನ ಮಠದ ಶ್ರೀ ಮುರುಘರಾಜೇಂದ್ರ ಮಹಾಸ್ವಾಮಿಗಳು ಹಾಗೂ ಮುಪ್ಪಯ್ಯನ ಮಠದ ಶ್ರೀ ರಾಚೋಟೇಶ್ವರ ಮಹಾಸ್ವಾಮಿಗಳ ನೇತ್ರತ್ವದಲ್ಲಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಜರುಗಿದವು.

ಮುಂಜಾನೆ 7ಗಂಟೆಗೆ ಬಸವೇಶ್ವರ ಮೂರ್ತಿಗೆ ರುದ್ರಾಭಿಷೇಕ, 8.30ಕ್ಕೆ ಡಾ.ಅರುಣ ತುಪ್ಪದ ಇವರಿಂದ ಷಟಸ್ಥಲ ಧ್ವಜಾರೋಹಣ ಹಾಗೂ ಮಹಾಲಿಂಗೇಶ್ವರ ಭಜನಾ ಮಂಡಳಿಯವರಿಂದ ಭಜನಾ ಸೇವೆ ನಡೆದವು. 9.30ಕ್ಕೆ ಇಲ್ಲಿಯ ಬಸವೇಶ್ವರ ವೃತ್ತದಲ್ಲಿ ಬಸವೇಶ್ವರ ಪುತ್ಥಳಿಗೆ ಮಾಲಾರ್ಪಣೆ ಹಾಗೂ ಷಟಸ್ಥಲ ಧ್ವಜಾರೋಹಣವನ್ನು ಪ್ರೋ.ಚಂದ್ರಶೇಖರ ಅಕ್ಕಿಯವರು ನೆರವೇರಿಸದರು. 10ಗಂಟೆಗೆ ಡಾ.ಸಂದೀಪ ಶಿರಹಟ್ಟಿ ಇವರಿಂದ ಸರಕಾರಿ ಆಸ್ಪತ್ರೆಯಲ್ಲಿ ರೋಗಿಗಳಿಗೆ ಹಣ್ಣು ಹಂಪಲು ವಿತರಿಸಲಾಯಿತು.

11 ಗಂಟೆಗೆ ದೇವಸ್ಥಾನದಲ್ಲಿ ಅಕ್ಕನ ಬಳಗ ಮಾತೆಯರಿಂದ ಬಸವೇಶ್ವರರ ನಾಮಕರಣ ಮತ್ತು ಮುತ್ತೈದೆಯರಿಗೆ ಉಡಿ ತುಂಬುವ ಕಾರ್ಯಕ್ರಮ ಹಾಗೂ ಮಹಾಪ್ರಸಾದ ಜರುಗಿತು. 5ಗಂಟೆಗೆ ಸಹನಾ ಮತ್ತು ಜಯಶೀಲ ಅಂಗಡಿ ದಂಪತಿಗಳಿಂದ ಪಲ್ಲಕ್ಕಿ ಪೂಜೆ ಹಾಗೂ ಹರ್ಷಾ ಮತ್ತು ಅಕ್ಷಯ ವರದಾಯಿ ದಂಪತಿಗಳಿಂದ ಬಸವೇಶ್ವರರ ಭಾವಚಿತ್ರ ಪೂಜೆ ನೆರವೇರಿಸಲಾಯಿತು. ದೇವಸ್ಥಾನದಿಂದ ಸಕಲ ವಾದ್ಯಗಳೊಂದಿಗೆ ಬಸವೇಶ್ವರರ ಭಾವಚಿತ್ರದ ಮೆರವಣಿಗೆಗೆ ಶ್ರೀ ಮುರುಘರಾಜೇಂದ್ರ ಮಹಾಸ್ವಾಮಿಗಳು ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಕಮೀಟಿಯ ಎಸ್ ಬಿ ಮಗದುಮ, ಬಿ ಎಸ್ ಕುಂಬಾರ, ಎ ಕೆ ಹೆಗ್ಗಣ್ಣವರ, ಎಮ್ ಜಿ ತಾಂವಶಿ, ಎಮ್ ಜಿ ಪಾಟೀಲ, ಅಶೋಕ ಪೂಜಾರಿ, ಡಾ.ಮಹಾಂತೇಶ ಕಡಾಡಿ ಸೇರಿದಂತೆ ಅನೇಕರು ಇದ್ದರು.

# ಮೂಡಲಗಿಯಲ್ಲಿ ಸಂಭ್ರಮದಿಂದ ಆಚರಿಸಿದ ಬಸವ ಜಯಂತಿ

**ಬೆಳಗಾವಿ ವಾರ್ತೆ ಮೂಡಲಗಿ:** ಮೂಡಲಗಿಯಲ್ಲಿ ವಿಶ್ವ ಗುರು ಬಸವೇಶ್ವರರ ಜಯಂತಿಯನ್ನು ಸಂಭ್ರಮದಿಂದ ಆಚರಿಸಿದರು.

ಜಗಜ್ಯೋತಿ ಬಸವೇಶ್ವರರ ಭಾವಚಿತ್ರ ಹಾಗೂ 25ಕ್ಕೂ ಅಧಿಕ ಜೋಡುತ್ತುಗಳ ಮೆರವಣಿಗೆಗೆ ಮೂಡಲಗಿ ಕೋ ಅಪರೇಟಿವ್ ಬ್ಯಾಂಕ್ ಅಧ್ಯಕ್ಷ ಸುಭಾಷ ಜಿ. ಢವಳೇಶ್ವರ ಅವರು ದೀಪ ಬೆಳಗಿಸುವ ಮೂಲಕ ಚಾಲನೆ ನೀಡಿದರು.

ಕರಡಿ ಮಜಲು, ಜಾಂಝು ಪಥಕ ಹಾಗೂ ವಿವಿಧ ವಾದ್ಯಗಳೊಂದಿಗೆ ಮೆರವಣಿಗೆಯು ಬಸವೇಶ್ವರ ದೇವಸ್ಥಾನದಿಂದ ಪ್ರಾರಂಭಗೊಂಡು ಶಿವಬೋಧರಂಗ ಮಠಕ್ಕೆ ಸಾಗಿ ಅಲ್ಲಿಂದ ಸಂಗಪ್ಪಣ್ಣ ಅಂಗಡಿ ವೃತ್ತ, ಕಲ್ಮೇಶ್ವರ ವೃತ್ತ, ಚನ್ನಮ್ಮ ವೃತ್ತದ ಮೂಲಕ ಸಾಗಿ ಬಸವೇಶ್ವರ ದೇವಸ್ಥಾನದ ಬಳಿಯಲ್ಲಿ ಸಮಾರೋಪಗೊಂಡಿತು.

ಕೋ.ಆಪ್ ಬ್ಯಾಂಕ್‌ದಿಂದ ಪ್ರತಿ ವರ್ಷದಂತೆ ಈ ವರ್ಷವೂ ಮೆರವಣಿಗೆಯಲ್ಲಿ ಜೊಡೆತ್ತುಗಳಿಂದ ಭಾಗವಹಿಸಿದ್ದ ರೈತರಿಗೆ ಪ್ರೋತ್ಸಾಹದಾಯಕ ಕಾಣಿಕೆಗಳನ್ನು ನೀಡಿದರು.



ಬಸವಪ್ರಭು ನಿಡಗುಂದಿ, ಬಿ.ಜಿ. ಗಡಾದ, ಬಸವರಾಜ ತೇಲಿ, , ಬಿ. ವೈ. ಶಿವಾಪೂರ, ಮಲ್ಲಿಕಾರ್ಜುನ ಢವಳೇಶ್ವರ, ಚನ್ನಬಸು ಬಡ್ಡಿ, ಎಸ್.ಎಸ್. ಪಾಟೀಲ, ಅನಿಲ ಪಾಟೀಲ, ಶಿವಪ್ಪ ಭುಜನ್ನವರ, ಸಂಗಪ್ಪ ಅಂಗಡಿ, ಶಿವಬಸು ಖಾನಟ್ಟಿ, ಶ್ರೀಶೈಲ್ ಮದಗನ್ನವರ, ಪಂಚಯ್ಯ ಹಿರೇಮಠ, ಚೇತನ ನಿಶಾನಿಮಠ, ಬಸವರಾಜ ಪಾಲಭಾವಿ ಮತ್ತು ಅನೇಕರು ಭಾಗವಹಿಸಿದ್ದರು.

# ಮಹಿಳೆಯರ ಕ್ಷಮೆ ಕೇಳಿ ರಾಜೀನಾಮೆ ನೀಡಿ: ಕಾಂಗ್ರೆಸ್ ಸಂಸದರಿಗೆ ಜೆಡಿಎಸ್ ಅಗ್ರಹ

## ಮಹಿಳಾ ಮೀಸಲಾತಿ ಮಸೂದೆಯ ಸೋಲಿಗೆ ಬೀದಿಗಿಳಿದು ಪ್ರತಿಭಟಿಸಿದ ಜೆಡಿಎಸ್ ಮಹಿಳಾ ಘಟಕ

**ಬೆಳಗಾವಿ ವಾರ್ತೆ ಕೊಪ್ಪಳ :** ಮಹಿಳೆಯರ ಬಗ್ಗೆ ಕಿಂಚತ್ತಾದರೂ ಕಳಕಳಿಯಿದ್ದರೇ ರಾಜಶೇಖರ್ ಹಿಟ್ನಾಳ್ ಸೇರಿದಂತೆ ರಾಜ್ಯದ ಒಂಬತ್ತೂ ಸಂಸದರು ಈ ಕೂಡಲೇ ರಾಜೀನಾಮೆ ನೀಡಿ ಮಹಿಳೆ ಯರ ಬೇಷರತ್ ಕ್ಷಮೆ ಕೇಳಬೇಕೆಂದು ಜೆಡಿಎಸ್ ರಾಜ್ಯ ಕೋರ್ ಕಮಿಟಿ ಸದಸ್ಯ ಸಿ ವಿ ಚಂದ್ರಶೇಖರ್ ಆಗ್ರಹಿಸಿದರು.

ಲೋಕಸಭೆಯಲ್ಲಿ ನಾರಿಶಕ್ತಿ (ವಂದನ್) ಮಸೂದೆಯ ಸೋಲಿನ ಹಿನ್ನೆಲೆಯಲ್ಲಿ ಇಂಡಿಯಾ ಒಕ್ಕೂಟದ ವಿರುದ್ಧ ಜೆಡಿಎಸ್ ಮಹಿಳಾ ಘಟಕ ಮಂಗಳವಾರ ಹಮ್ಮಿಕೊಂಡಿದ್ದ ಪ್ರತಿಭಟನಾ ಸಭೆಯಲ್ಲಿ ಅವರು ಮಾತನಾಡಿದರು.

**"ಕಾಂಗ್ರೆಸ್ ಸಂಸದರಿಗೆ ಮಹಿಳೆಯರು ಮತ ಹಾಕಿಲ್ಲವೇ?**

ಮಹಿಳಾ ಮತದಾರರು ಸಂಸದರಿಗೆ ಏನು ಅನ್ಯಾಯ ಮಾಡಿದ್ದರು? ಮಹಿಳೆಯರ ಗೌರವಕ್ಕಿಂತಲೂ ಹೈಕಮಾಂಡ್ ಗುಲಾಮಗಿರಿತನ ಸಂಸದರಿಗೆ ಹೆಚ್ಚಾಯಿತೆ?" ಎಂಬ ಪ್ರಶ್ನೆಗಳ ಸುರಿಮಳೆ ಗರೆದರು.

ಕ್ರೀಡಾ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳ ಹೆಸರಿನಲ್ಲಿ ಅಸಭ್ಯ ಕ್ರಿಯೆಗಳನ್ನು ಪ್ರೋತ್ಸಾಹಿಸಿ ಮುಂದಿನ ಪೀಳಿಗೆಯ ಹೆಣ್ಣು ಮಕ್ಕಳನ್ನು ದಾರಿ ತಪ್ಪಿಸುವಲ್ಲಿ ಇರುವ ಆಸಕ್ತಿ ಕೊಪ್ಪಳದ ಸಂಸದರಿಗೆ ಹೆಣ್ಣು ಮಕ್ಕಳಿಗೆ ನ್ಯಾಯ ಕೊಡಿಸಬೇಕು ಎಂಬ ವಿಷಯದಲ್ಲಿ ಏಕಿಲ್ಲ? ಯಾವ ಕಾರಣಕ್ಕಾಗಿ ಕೊಪ್ಪಳದ ಮಹಿಳೆಯರಿಗೆ ಮೋಸ ಮಾಡಿದಿರಿ? ಮಾಡಿದ ಅನ್ಯಾಯಕ್ಕೆ ಕ್ಷಮೆ ಕೇಳಿ, ರಾಜೀನಾಮೆ ಸಲ್ಲಿಸಿ, ಸಾಮಾನ್ಯ ಕುಟುಂಬದ ಮಹಿಳೆಯನ್ನು ಚುನಾವಣೆಗೆ ನಿಲ್ಲಿಸಿ ಗೆಲ್ಲಿಸಿ ಪಾಶ್ಚಾತಾಪ ಮಾಡಿಕೊಳ್ಳಿ ಎಂದು ಒತ್ತಾಯಿಸಿದರು.

"ಕಾಂಗ್ರೆಸ್ ನಿಂದ ಭಾರತದ ಮಹಿಳಾ ಶಕ್ತಿಗೆ ಅಪಮಾನವಾಗಿದೆ. ಕಾಂಗ್ರೆಸ್ ಸಂಸದರಿಗೆ ಮಹಿಳೆಯರ ಶಾಪ ತಟ್ಟುತ್ತದೆ. ದೇಶದ ಅಭಿವೃದ್ಧಿಯಲ್ಲಿ ಮಹಿಳೆಯರು ಪಾಲ್ಗೊಳ್ಳಬೇಕು ಎಂಬುದು ನಮ್ಮ ಚಿಂತನೆ. ಆದರೆ ಕಾಂಗ್ರೆಸ್ ಅದನ್ನು ವಿರೋಧಿಸುತ್ತಿದೆ. ನಮ್ಮ ಪಕ್ಷದ ರಾಷ್ಟ್ರಾಧ್ಯಕ್ಷರಾದ ಹೆಚ್ ಡಿ ದೇವೇಗೌಡ





ಅವರು ಪ್ರಧಾನಿಗಳಾಗಿದ್ದಾಗ ಈ ಮಸೂದೆಯನ್ನು ಮಂಡಿಸಿದ್ದರು. ಅಂದು ಇದೇ ಕಾಂಗ್ರೆಸ್ ಪಕ್ಷ ಮಸೂದೆಯನ್ನು ಸೋಲಿಸಿತ್ತು. ಕಾಂಗ್ರೆಸ್ ಪಕ್ಷದ ಈ ನೀತಿಗೆ ಮುಂದಿನ ದಿನಗಳಲ್ಲಿ ನಾವು ತಕ್ಕ ಪಾಠ ಕಲಿಸುತ್ತೇವೆ," ಎಂದು ನಗರ ಮಹಿಳಾ ಘಟಕದ ಅಧ್ಯಕ್ಷೆ ನಿರ್ಮಲ ಮೇದಾರ್ ಹೇಳಿದರು.

ಮಹಿಳಾ ಸಬಲೀಕರಣದ ಕುರಿತು ಮಾತನಾಡುವ ನೈತಿಕತೆಯನ್ನು ಕಾಂಗ್ರೆಸ್ ಕಳೆದುಕೊಂಡಿದೆ. ಪ್ರಪಂಚದ ವಿವಿಧ ದೇಶಗಳು ಮಹಿಳೆಯರಿಗೆ ಸಮಾನ ಅವಕಾಶ ಕಲ್ಪಿಸಿವೆ. ಇಂತಹ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷ ಮಹಿಳೆಯರನ್ನು ಕತ್ತಲೆ ಕೂಪಕ್ಕೆ ತಳ್ಳುವ ಕೆಲಸ ಮಾಡುತ್ತಿದೆ.

ಎನ್ ಡಿ ಎ ಸರಕಾರ ಮತ್ತೊಮ್ಮೆ ಈ ಮಸೂದೆಯನ್ನು ಶೀಘ್ರದಲ್ಲಿ ಮಂಡಿಸಲಿದೆ. ಆ ಸಂದರ್ಭದಲ್ಲಿ ಕಾಂಗ್ರೆಸ್ ಆ ಮಸೂದೆಗೆ ಬೆಂಬಲ ಸೂಚಿಸಿ ಅನ್ಯಾಯವನ್ನು ಸರಿಪಡಿಸಬೇಕು," ಎಂದು ನಗರ ಘಟಕ ಮಹಿಳಾ ವಿದ್ಯಾರ್ಥಿ ವಿಭಾಗದ ಅಧ್ಯಕ್ಷೆ ಜಯಶ್ರೀ ಮೇದಾರ್ ಒತ್ತಾಯಿಸಿದರು.

ರಾಜ್ಯದಿಂದ ಆಯ್ಕೆಯಾದ ಸಂಸದರಲ್ಲಿ ಇಬ್ಬರು ಮಹಿಳಾ ಸಂಸದರಿಗೆ ತಾವು ಭಾರತದ ಪ್ರತಿ ಮಹಿಳೆಗೆ ಅನ್ಯಾಯ ಮಾಡುತ್ತಿರುವ ವಿಷಯ ತಿಳಿಯಲಿಲ್ಲವೇ? ಇಂದಿರಾಗಾಂಧಿ ಹಾಗೂ ಸೋನಿಯಾ ಗಾಂಧಿ ಮಹಿಳೆಯರು ಎಂಬುದನ್ನು ಕಾಂಗ್ರೆಸ್ ನಾಯಕರು ಮರೆತರೆ? ಮುಂದೆ ಬರುವ ಎಲ್ಲಾ ಚುನಾವಣೆಗಳಲ್ಲಿ ಮಹಿಳೆಯರು ಕಾಂಗ್ರೆಸ್ ವಿರುದ್ಧ ಮತ ಚಲಾಯಿವುದು ನಿಶ್ಚಿತ ಎಂದು ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ರಶ್ಮಿ ಚಳಗೇರಿ ಹೇಳಿದರು.

ಮಹಿಳಾ ಮೀಸಲಾತಿ ಮಸೂದೆಯನ್ನು ಸೋಲಿಸುವ ಮೂಲಕ ಕಾಂಗ್ರೆಸ್ ಪಕ್ಷ ತನ್ನ ಶವ ಪೆಟ್ಟಿಗೆಗೆ ತಾನೇ ಕೊನೆಯ ಮಳೆ ಹೊಡೆದುಕೊಂಡಿದೆ. ಅನ್ಯಾಯದ ವಿರುದ್ಧ ಮಹಿಳೆಯರು ಒಗ್ಗಟ್ಟಾಗಿ ಹೋರಾಡುವುದು ನಿಶ್ಚಿತ ಎಂದು ಜಿಲ್ಲಾಧ್ಯಕ್ಷ ಸುರೇಶ್ ಭೂಮರೆಡ್ಡಿ ಹೇಳಿದರು.

ಎನ್ ಡಿ ಎ ಸರಕಾರ ಮತ್ತೊಮ್ಮೆ ಈ ಮಸೂದೆಯನ್ನು ಮಂಡಿಸಲಿದೆ. ಈ ಮಸೂದೆ ಅವಿರೋಧ'ವಾಗಿ ಅಂಗೀಕಾರಗೊಂಡು ಶಾಸನವಾಗುವಂತೆ ನೋಡಿಕೊಳ್ಳುವ ಜವಾಬ್ದಾರಿ ವಿರೋಧ ಪಕ್ಷಗಳ ಪ್ರತಿಯೊಬ್ಬ ಸಂಸದರ ಮೇಲಿದೆ ಎಂದು ಜಿಲ್ಲಾ ಉಪಾಧ್ಯಕ್ಷ ಮೂರ್ತಪ್ಪ ಗಿಣಿಗೇರಿ ಹೇಳಿದರು.

ಮುಸೂದೆ ಮುಂದಿನ ಲೋಕಸಭಾ ಚುನಾವಣೆಯ ಒಳಗಾಗಿಯೇ ಶಾಸನವಾಗಬೇಕು ಹಾಗೂ ಅದರ ಲಾಭ ಮಹಿಳೆಯರಿಗೆ ಸಿಗಬೇಕು ಎಂದು ಜಿಲ್ಲಾ ಒಬಿಸಿ ಘಟಕದ ಅಧ್ಯಕ್ಷ ಕರಿಯಪ್ಪ ಹಾಲವರ್ತಿ ಹೇಳಿದರು.

ರಾಜಕೀಯ ಕ್ಷೇತ್ರದಲ್ಲಿ 33% ಮೀಸಲಾತಿ ಮಹಿಳೆಯರಿಗೆ ಸಿಗಬೇಕೆಂಬುದು ದಶಕಗಳ ಹಳೆಯ ಬೇಡಿಕೆ. ಕೆಲವು ಪಾಶ್ಚಾತ್ಯ ದೇಶಗಳು 1970ರ ದಶಕದ ತನಕ ಮಹಿಳೆಯರಿಗೆ ಮತದಾನದ ಹಕ್ಕನ್ನು ನೀಡಲಿಲ್ಲ. ಅಂತಹ ಹಕ್ಕನ್ನು ಭಾರತ ದೇಶ 1950 ರಿಂದಲೇ ನೀಡಿದ್ದು ಐತಿಹಾಸಿಕ ಸತ್ಯ. ನಂತರದಲ್ಲಿ ವಿಶ್ವದ ಅನೇಕ ರಾಷ್ಟ್ರಗಳು ರಾಜಕೀಯದಲ್ಲಿ ಮಹಿಳೆಯರಿಗೆ ಸಮಾನ ಅವಕಾಶವನ್ನು ಕಲ್ಪಿಸಿವೆ. ಆದರೆ ರಾಜಕೀಯ ಸಮಾನತೆ ಭಾರತದಂತಹ ಬೃಹತ್ ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಕನಸಾಗಿಯೇ ಉಳಿದಿದೆ ಎಂದು ಜಿಲ್ಲಾ ವಕ್ತಾರ ಮಲ್ಲನಗೌಡ ಕೋಣನಗೌಡ್ರು ಹೇಳಿದರು.

"ಭಾರತದ ಸಂವಿಧಾನ ಸಮಾನತೆಯನ್ನು ಎತ್ತಿ ಹಿಡಿಯುತ್ತದೆ. ಆದರೆ ರಾಜಕೀಯದಲ್ಲಿ ಮಹಿಳೆಯರಿಗೆ ಸಮಾನತೆ ಇಲ್ಲದೇ ಇರುವುದು ಸಂವಿಧಾನದ ಆಶಯಗಳ ಉಲ್ಲಂಘನೆ. ಮುಂದಿನ ದಿನಗಳಲ್ಲಿ ಇಂಡಿ ಒಕ್ಕೂಟದ ಸದಸ್ಯರು ಈ ಮಸೂದೆಗೆ ವಿರೋಧ ವ್ಯಕ್ತಪಡಿಸಿದರೆ ಈ ದೇಶಾದ್ಯಂತ ರಾಜಕತೆ ಸೃಷ್ಟಿಯಾಗಲಿದೆ," ಜಿಲ್ಲಾ ಗೌರವಾಧ್ಯಕ್ಷ ಈಶಪ್ಪ ಮಾದಿನೂರು ಹೇಳಿದರು.

ಪ್ರತಿಭಟನಾಕಾರರು ಇಂಡಿಯಾ ಒಕ್ಕೂಟದ ಸಂಸದರ ವಿರುದ್ಧ ಘೋಷಣೆಗಳನ್ನು ಕೂಗಿ ಅವರ ರಾಜೀನಾಮೆಗೆ ಒತ್ತಾಯಿಸಿದರು.

ನಾರಿ ಶಕ್ತಿ (ವಂದನ್) ಅಂಗೀಕಾರ ಗೊಳ್ಳುವಂತೆ ನೋಡಿಕೊಳ್ಳಬೇಕು ಎಂದು ಒತ್ತಾಯಿಸಿ ಸರಕಾರಕ್ಕೆ ಜಿಲ್ಲಾಧಿಕಾರಿಗಳ ಮುಖಾಂತರ ಮನವಿ ಪತ್ರ ಸಲ್ಲಿಸಿದರು.

ಉಪ ವಿಭಾಗಾಧಿಕಾರಿ ಕ್ಯಾಪ್ಟನ್ ಮಹೇಶ್ ಮಾಲಗಿತ್ತಿ ಮನವಿ ಪತ್ರ ಸ್ವೀಕರಿಸಿದರು.

ನಗರ ಮಹಿಳಾ ಘಟಕದ ಗೌರವ ಅಧ್ಯಕ್ಷೆ ರತ್ನಮ್ಮ ಹಿರೇಮಠ, ನಗರ ಮಹಿಳಾ ಘಟಕದ ಉಪಾಧ್ಯಕ್ಷ ಶರಣಮ್ಮ ಸಂಗನಾಳ, ತಾಲೂಕು ಅಧ್ಯಕ್ಷ ವೀರೇಶ್ ಗೌಡ್ರು ದಳಪತಿ, ಜಿಲ್ಲಾ ಸಂಸ್ಕೃತಿ ವಿಭಾಗದ ಅಧ್ಯಕ್ಷ ಮಂಜುನಾಥ್ ಸೊರಟೂರ್, ಎಸ್ ಟಿ ಘಟಕದ ಅಧ್ಯಕ್ಷ ರಮೇಶ್ ಡಂಬ್ರಳ್ಳಿ, ತಾಲೂಕು ಪ್ರಧಾನ ಕಾರ್ಯದರ್ಶಿ ಶಿವಕುಮಾರ್ ಏಣಗಿ, ನಗರ ಘಟಕದ ಅಧ್ಯಕ್ಷ ಸೋಮನಗೌಡ ಹೊಗರನಾಳ, ಅಲ್ಪಸಂಖ್ಯಾತ ಘಟಕದ ಜಿಲ್ಲಾಧ್ಯಕ್ಷ ಸಿರಾಜ್ ಬಿಜಾಪುರ್, ಕ್ರೀಡಾ ವಿಭಾಗದ ಅಧ್ಯಕ್ಷ ಸೈಯದ್ ಮಹೇಮೂದ್ ಹುಸೇನಿ ಬಲ್ಲೆ ಸೇರಿದಂತೆ ಅನೇಕ ಮುಖಂಡರು ಉಪಸ್ಥಿತರಿದ್ದರು.

# ಶ್ರೀ ಶಂಕರಾಚಾರ್ಯರ ಜಯಂತ್ಯೋತ್ಸವ



**ಬೆಳಗಾವಿ ವಾರ್ತೆ ಲಕ್ಷ್ಮೇಶ್ವರ:** ಪಟ್ಟಣದ ತಹಸೀಲ್ದಾರ ಕಚೇರಿಯಲ್ಲಿ ಮಂಗಳವಾರ ಆದಿ ಶ್ರೀ ಶಂಕರಾಚಾರ್ಯರ ಜಯಂತ್ಯೋತ್ಸವ ಕಾರ್ಯಕ್ರಮವನ್ನು ಅದ್ದೂರಿಯಾಗಿ ಆಚರಿಸಲಾಯಿತು. ಬ್ರಾಹ್ಮಣ ಸಮಾಜದವರು ಸೇರಿದಂತೆ ವಿವಿಧ ಸಮಾಜಗಳ ಮುಖಂಡರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ತಹಸೀಲ್ದಾರ ಧನಂಜಯ ಎಂ., ಶಂಕರಾಚಾರ್ಯರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ ಶಂಕರಾಚಾರ್ಯರರು ಜಗತ್ತಿನ ಎಲ್ಲ ಸಮಾಜದವರನ್ನು ಕೂಡಿಕೊಂಡು ಹೋಗುವ ಎಲ್ಲರೂ ಒಂದೇ ಎನ್ನುವ ಭಾವನೆಯನ್ನು ಸಮಾಜದಲ್ಲಿ ಬಿತ್ತುವ ಕಾರ್ಯಮಾಡಿದ್ದು, ಸಮಾನತೆಯ ತತ್ವವನ್ನು ಸಾರಿ ಹೇಳಿದ್ದರು. ತಮ್ಮ ಆಳವಾದ ಅಧ್ಯಯನದಿಂದ ಚಿಕ್ಕ ವಯಸ್ಸಿನಲ್ಲಿಯೇ ಅಪಾರ ಜ್ಞಾನವನ್ನು ಸಂಪಾದಿಸಿದ್ದ ಶ್ರೀಗಳ ಕೊಡುಗೆಗಳು ಭಾರತದ ಆಧ್ಯಾತ್ಮಿಕ ಮತ್ತು ತಾತ್ವಿಕವಾಗಿ ಈ ಜಗತ್ತಿನ ಮೇಲೆ ಶಾಶ್ವತವಾದ ಪ್ರಭಾವ ಬೀರಿವೆ. ಅಂತಹ ಮಹಾನ ಶ್ರೇಷ್ಠರನ್ನು ಒಂದೇ ಜಾತಿಗೆ ಸೀಮಿತಗೊಳಿಸುವದು ಬೇಡ, ಎಲ್ಲ ಜಾತಿಯ ಎಲ್ಲ ಧರ್ಮದವರಿಗೂ ಅವರು ನೀಡಿದ ಕೊಡುಗೆಗೆಗಳು ಸದಾ ಎಲ್ಲ ಕಾಲಕ್ಕೂ ಪ್ರಸ್ತುತ ಎಂದು ಹೇಳಿದರು.

ತಾಲೂಕ ಬ್ರಾಹ್ಮಣ ಸಮಾಜದಧ್ಯಕ್ಷ ಕೃಷ್ಣ ಕುಲಕರ್ಣಿ ಮಾತನಾಡಿ ಶಂಕರಾಚಾರ್ಯರನ್ನು ಭಾರತೀಯ ತತ್ವಶಾಸ್ತ್ರದ ಶ್ರೇಷ್ಠ ವ್ಯಕ್ತಿಯಲ್ಲಿ ಒಬ್ಬರೆಂದು ಪರಿಗಣಿಸಲಾಗುತ್ತದೆ. ಕೇರಳದ ಒಂದು ಸಣ್ಣ ಹಳ್ಳಿಯಾದ ಕಾಲಡಿಯಲ್ಲಿ 788 ರಲ್ಲಿ ಜನಿಸಿದ ಆದಿ ಆದಿ ಶಂಕರಾಚಾರ್ಯರು ಅವರು 820 ರಲ್ಲಿ 32 ನೇ ವಯಸ್ಸಿನಲ್ಲಿ ನಿಧನರಾಗುವ ಮೊದಲು ಆಳವಾದ ಆಧ್ಯಾತ್ಮಿಕ ಮತ್ತು ಬೌದ್ಧಿಕ ಮೈಲಿಗಲ್ಲುಗಳನ್ನು ಸಾಧಿಸಿದರು. ಅವರ ಅಲ್ಪಾವಧಿಯ ಜೀವಿತಾವಧಿಯಲ್ಲಿ ಹಿಂದೂ ಧರ್ಮದ ಪುನರುತ್ಥಾನಕ್ಕೆ ನೀಡಿದ ಕೊಡುಗೆಯು ಅಪಾರವಾಗಿದೆ. ವೈಶಾಖ ಮಾಸದ ಶುಕ್ಲ ಪಕ್ಷದ ಪಂಚಮಿ ತಿಥಿಯಂದು ಆಚರಿಸಲಾಗುತ್ತದೆ. ಈ ಶುಭ ದಿನದಂದು ಅವರ ಸ್ಮರಣೆಯನ್ನು, ಪ್ರಾರ್ಥನೆಗಳು, ಅವರ ಬೋಧನೆಗಳ ಕುರಿತಾದ ಪ್ರವಚನಗಳನ್ನು ನಡೆಸಲಾಗುತ್ತದೆ.

ಶಂಕರಾಚಾರ್ಯರು ಎಲ್ಲ ಜಾತಿಗಳು ಧರ್ಮಗಳು ಒಂದೇ ಎನ್ನುವ ನಿಟ್ಟಿನಲ್ಲಿ ಧರ್ಮ ಪ್ರಚಾರ ಮಾಡಿದರು, ಅದರಂತೆ ಲಿಂ.ಜ. ವೀರಗಂಗಾಧರ ಭಗವತ್ಪಾದರು ಮಾನವ ಧರ್ಮಕ್ಕೆ ಜಯವಾಗಲಿ ಎನ್ನುವ ಮೂಲಕ ಎಲ್ಲ ಧರ್ಮಗಳ ಸಾರವನ್ನು ಜಗತ್ತಿಗೆ ತಿಳಿಸುವ ಕಾರ್ಯ ಮಾಡಿದ್ದರು, ಜಗಜ್ಯೋತಿ ಬಸವಣ್ಣನವರು ಸಹ ಜಾತಿ ಜಾತಿಗಳ ಅಂತರವನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಸಮಸಮಾಜ ನಿರ್ಮಾಣಕ್ಕೆ ಶ್ರಮಿಸಿದರು, ಇಂತಹ ಅನೇಕ ಯುಗ ಪುರುಷರು ನೀಡಿದ ಸಂದೇಶಗಳನ್ನು ಪ್ರತಿಯೊಬ್ಬರು ಅಳವಡಿಸಿಕೊಂಡಲ್ಲಿ ಶಾಂತಿ ನೆಮ್ಮದಿ ನೆಲೆಸಲು ಸಾಧ್ಯ ಎಂದು ಹೇಳಿದರು.

ಸಭೆಯಲ್ಲಿ ಬ್ರಹ್ಮವೃಂದದ ಅಧ್ಯಕ್ಷ ಗೋಪಾಲ ಪಡ್ನೀಸ್, ಅರವಿಂದ ದೇಶಪಾಂಡೆ, ಬಿ.ಕೆ.ಕುಲಕರ್ಣಿ,ದೃವರಾಜ ಬೆಟಗೇರಿ, ಸಾಹುಕಾರ, ರಾಘವೇಂದ್ರ ಪೂಜಾರ, ದಿಗಂಬರ ಪೂಜಾರ ಡಾ.ಪ್ರಸನ್ನ ಕುಲಕರ್ಣಿ, ಡಿ.ಪಿ.ಹೇಮಾದ್ರಿ, ಗುರುರಾಜ ಪಾಟೀಲಕುಲಕರ್ಣಿ, ಎಸ್.ಬಿ.ಅಣ್ಣಿಗೇರಿ, ಪ್ರಶಾಂತ ಕಿಮಾಯಿ, ರೇಣುಕಾ ಶಿರಹಟ್ಟಿ, ಪ್ರಶಾಂತ ಸನದಿ, ನಿರ್ಮಲಾ, ಹಾಗೂ ಕಚೇರಿ ಸಿಬ್ಬಂದಿಗಳು, ಸಮಾಜ ಬಾಂಧವರು ಪಾಲ್ಗೊಂಡಿದ್ದರು.

# ಮಹಾಮಾನವತಾವಾದಿ ಸಮಾನತೆಯ ಹರಿಕಾರ ವಿಶ್ವಗುರು ಬಸವಣ್ಣನವರ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಆಚರಣೆಗೆ ತನ್ನಿ



**ಬೆಳಗಾವಿ ವಾರ್ತೆ ಗೋಕಾಕ:** ಮಹಾಮಾನವತಾವಾದಿ ಸಮಾನತೆಯ ಹರಿಕಾರ ವಿಶ್ವಗುರು ಬಸವಣ್ಣನವರ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಆಚರಣೆಗೆ ತರುವಂತೆ ಶಾಸಕ ರಮೇಶ ಜಾರಕಿಹೊಳಿ ಹೇಳಿದರು.

ಅವರು, ಸೋಮವಾರದಂದು ನಗರದ ಶಾಸಕರ ಕಾರ್ಯಾಲಯದಲ್ಲಿ ಬಿಜೆಪಿ ನಗರ ಹಾಗೂ ಗ್ರಾಮೀಣ ಮಂಡಲದ ವತಿಯಿಂದ ಹಮ್ಮಿಕೊಂಡ ಶ್ರೀ ಬಸವೇಶ್ವರ ಜಯಂತೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡುತ್ತಿದ್ದರು.

12ನೇ ಶತಮಾನದಲ್ಲಿ ಪ್ರಜಾಪ್ರಭುತ್ವದ ಅನುಭವ ಮಂಟಪ ಸ್ಥಾಪಿಸಿ ಸಾಮಾಜಿಕ ಸಮಾನತೆ ಕಲ್ಪಿಸಿದ್ದರು. ಬಸವಣ್ಣನವರ ವಿಚಾರಧಾರೆಗಳು ಸರ್ವರಿಗೂ ಸರ್ವಕಾಲಕ್ಕೂ ದಾರಿದೀಪವಾಗಿವೆ. ಜನಸಾಮಾನ್ಯರಿಗೆ ಅರ್ಥವಾಗುವ ರೀತಿಯಲ್ಲಿ ವಚನಗಳನ್ನು ರಚಿಸಿ ಧರ್ಮಜಾಗೃತಿ ಮೂಡಿಸಿ, ಸ್ತ್ರೀಸ್ವಾತಂತ್ರ್ಯಕ್ಕೆ ಬುನಾದಿ ಹಾಕಿದ್ದರು. ಅವರ ತತ್ವಾದರ್ಶಗಳಿಂದ ವಿಶ್ವಗುರುವಾಗಿದ್ದರು. ಅವರು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ನಾವೆಲ್ಲರೂ ನಡೆಯೋಣ ಎಂದರು.

ಈ ಸಂದರ್ಭದಲ್ಲಿ ಬಿಜೆಪಿ ನಗರ ಮಂಡಲ ಅಧ್ಯಕ್ಷ ಭೀಮಶಿ ಭರಮನ್ನವರ, ಶಾಸಕರ ಆಪ್ತ ಸಹಾಯಕ ಭೀಮಗೌಡ ಪೋಲಿಸಗೌಡರ, ಕಾಂತು ಎತ್ತಿನಮನಿ, ಜಿಪಂ ಮಾಜಿ ಸದಸ್ಯರಾದ ಟಿ ಆರ್ ಕಾಗಲ, ಎಮ್ ಎಲ್ ತೋಳಿನವರ, ಬಿಜೆಪಿ ಮುಖಂಡರಾದ ಜಯಾನಂದ ಹುಣಚ್ಯಾಳಿ, ಸುರೇಶ ಪತ್ತಾರ, ರಾಜೇಶ್ವರಿ ಒಡೆಯರ, ಬಸವಂತಪ್ಪ ಉಳ್ಳೆಗಡ್ಡಿ, ಕಮಲಕ್ಕ ಚೌಧರಿ, ಮಹಾನಿಂಗ ಹಿರಟ್ಟಿ, ಸುಧೀರ ಜೊಡಟ್ಟಿ, ಬಸವರಾಜ ಮಾಳಗಿ, ರಾಜೇಶ ಉಳ್ಳಾಗಡ್ಡಿ ಇದ್ದರು.

# ಮನುಕುಲದ ಮಹಾನ್ ಚೇತನ ಬಸವಣ್ಣ; ಡಾ.ಅರ್ಚನಾ ಅಥಣಿ

**ಬೆಳಗಾವಿ ವಾರ್ತೆ ಮೋಳೆ;-** ಕಾಯಕಯೋಗಿ ಬಸವಣ್ಣ ಮಹಾ ಮನವತಾವಾದಿ ಹಾಗೂ ಮನುಕುಲ ಕಂಡ ಮಹಾನ್ ಚೇತನ್,ಅವರ ತತ್ವಾದರ್ಶಗಳು ಅಧುನಿಕ ಸಮಾಜಕ್ಕೆ ಮಾರ್ಗದರ್ಶಕವಾಗಿವೆ ಎಂದು ಸಾಹಿತಿ ಡಾ. ಅರ್ಚನಾ ಅಥಣಿ ಹೇಳಿದರು.

ಅವರು ಸೋಮವಾರ ಖವಟಕೊಪ್ಪ ಗ್ರಾಮದಲ್ಲಿ ಶ್ರೀ ಬಸವಣ್ಣನವರ ಮೂರ್ತಿಗೆ ಪೂಜೆ ಸಲ್ಲಿಸಿ ಆಧ್ಯಾತ್ಮಿಕ ವಿಶೇಷ ಪ್ರವಚಣ ಕಾರ್ಯಕ್ರಮದಲ್ಲಿ ಮಾತನಾಡುತ್ತಿದ್ದರು.ದೇಶ ಕಂಡ ಯುಗ ಪ್ರವರ್ತಕ ಬಸವಣ್ಣ, ಅವರ ಜಯಂತಿ ಆಚರಣೆ ಅಧುನಿಕ ಜಗತ್ತಿಗೆ ಅನಿವಾರ್ಯ.12 ನೇ ಶತಮಾನದಲ್ಲಿ ತಾಂಡವವಾಡುತ್ತಿದ್ದ ಅಜ್ಞಾನ, ಅಂಧಕ್ಕಾರ, ಜಾತೀಯತೆ ವಿರುದ್ಧ ಧ್ವನಿ ಎತ್ತಿದವರು, ಇಂತಹ ಶ್ರೇಷ್ಠ ವ್ಯಕ್ತಿಯನ್ನು ಕೇವಲ ಒಂದು ಸಮುದಾಯಕ್ಕೆ ಸೀಮಿತ ಮಾಡದೆ ಸಮಾಜದ ಎಲ್ಲ ವರ್ಗಗಳ ಮನೆಗಳಲ್ಲೂ ಹಬ್ಬದ ರೀತಿಯಲ್ಲಿ ಬಸವ ಜಯಂತಿ ಆಚರಿಸಬೇಕೆಂದರು.

ಸಾಹಿತಿ ಡಾ.ವ್ಹಿ.ಎಸ್.ಮಾಳಿ ಮಾತನಾಡಿ 12ನೇ ಶತಮಾನದಲ್ಲಿ ಒಂದು ಜಾತಿ ಶ್ರೇಷ್ಠ ಮತ್ತು ಇನ್ನೊಂದು ಜಾತಿ ಕನಿಷ್ಠ ಎಂಬ ಅಸಮಾನತೆಯ ಕಗ್ಗತ್ತಲು ಜಗತ್ತನ್ನು ಆವರಿಸಿದಾಗ, ವಿಶ್ವ ಗುರು ಬಸವಣ್ಣನವರು ಸಮಾನತೆಗಾಗಿ ಹೋರಾಡಿದರು, ಅವರು ವಿಶ್ವದ ಮೊದಲ ಸಮಾನತೆಯ ಹರಿಕಾರ, ಮಾನವ ಹಕ್ಕುಗಳ ಹೋರಾಟಗಾರ ಮತ್ತು ಮಹಾನ್ ಮಾನವತಾವಾದಿ ಎಂದು ಕರೆಯುವುದರಲ್ಲಿ ತಪ್ಪೆನಿಲ್ಲ. ವಿಶ್ವವೇ ಅವರನ್ನು ಸಾಂಸ್ಕೃತಿಕ ನಾಯಕ ಎಂದು ಗೌರವಿಸಿದೆ ಮತ್ತು ಜನತೆ ಅವರನ್ನು ವಿಶ್ವಗುರು ಎಂದು ಪೂಜಿಸುತ್ತಾರೆ ಎಂದು ಹೇಳಿದರು.

ಬಸವಣ್ಣನವರು ಮೂಢನಂಬಿಕೆ, ಅಸಮಾನತೆ ವಿರುದ್ಧ ಹೋರಾಡಿದ ನಾಯಕ, "ದಯವೇ ಧರ್ಮದ ಮೂಲವಯ್ಯಾ" ಎಂಬ ವಚನದಂತೆ ನಡೆದರೆ ಜಗತ್ತಿನಲ್ಲಿ ಎಲ್ಲರು ಶಾಂತಿಯಿಂದಿರ ಬಹುದು, ಲಂಡನ್‌ನ ಅಥೆನ್ಸಾದಲ್ಲಿ ಬಸವಣ್ಣನವರ ಪ್ರತಿಮೆ ಸ್ಥಾಪಿಸಿರುವುದು ಹೆಮ್ಮೆಯ ವಿಷಯ, ಅವರ ತತ್ವಾದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ಪಪೂಜ್ಯ ಡಾ.ಅಭಿನವ ಬ್ರಹ್ಮಾನಂದ ಮಹಾಸ್ವಾಮಿಗಳು ವೃತದಲ್ಲಿ ಬಸವಣ್ಣನವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಕ್ರಾಂತಿಕಾರಿ ಬಸವಣ್ಣನ ತತ್ವಾದರ್ಶಗಳು ಅಧುನಿಕ ಸಮಾಜಕ್ಕೆ ಮಾರ್ಗದರ್ಶಕವಾಗಿವೆ, ಸಮಸಮಾಜ ನಿರ್ಮಾಣಕ್ಕೆ ಕ್ರಾಂತಿ ಮಾಡಿದ ಬಸವೇಶ್ವರರ ತತ್ವಾದರ್ಶಗಳಿಂದ ಶಾಂತಿತಯುತ ಸಮಾಜ ನಿರ್ಮಾಣ ಮಾಡಬಹುದೆಂದರು.

ಈ ವೇಳೆ ಶರಣ ಹಣಮಂತ ಚಿಕ್ಕಣ್ಣವರ, ವೀಣಾ ಉಗಾರೆ, ಮಲ್ಲಪ್ಪ ಸತ್ತಿ,ಸೂರ್ಯಕಾಂತ ಮಾಳಿ, ಗುರುರಾಜ ಚೌಗುಲಾ ಸೇರಿದಂತೆ ನೂರಾರು ಶರಣ, ಶರಣೆಯರು ಪಾಲ್ಗೊಂಡಿದ್ದರು



ಮೋಳೆ: ಖವಟಕೊಪ್ಪ ಗ್ರಾಮದಲ್ಲಿ ಬಸವ ಜಯಂತಿ ನಿಮಿತ್ಯ ಏರ್ಪಡಿಸಿರುವ ಕಾರ್ಯಕ್ರಮದಲ್ಲಿ ಡಾ.ಅರ್ಚನಾ ಅಥಣಿ ಸನ್ಮಾನ ಸ್ವೀಕರಿಸಿ ಮಾತನಾಡುತ್ತಿರುವ ಚಿತ್ರ.

# ಬಸವ ಜಯಂತಿ ನಿಮಿತ್ತ : ಕಲ್ಲೋಳಿಯಲ್ಲಿ ಜೋಡೆತ್ತುಗಳ ಭವ್ಯ ಮೆರವಣಿಗೆ

**ಬೆಳಗಾವಿ ವಾರ್ತೆ ಮೂಡಲಗಿ:** ತಾಲ್ಲೂಕಿನ ಕಲ್ಲೋಳಿಯಲ್ಲಿ ಬಸವ ಜಯಂತಿ ಹಾಗೂ ರಾಮಲಿಂಗೇಶ್ವರ ಜಾತ್ರೆಯ ಅಂಗವಾಗಿ ಬಸವೇಶ್ವರ ಸೌಹಾರ್ದ ಸಹಕಾರಿ ಸಂಘದಿಂದ ಆಯೋಜಿಸಿದ್ದ ಜೊಡೆತ್ತಿನ ಮೆರವಣಗೆಯು ಜರುಗಿತು.

ಬಸವೇಶ್ವರ ಸೌಹಾರ್ದ ಸಹಕಾರಿ ಸಂಘದ ಅಧ್ಯಕ್ಷ ಬಾಳಪ್ಪ ಬ. ಬೆಳಕೂಡ ಅವರು ಜೊಡೆತ್ತಿನ ಮೆರವಣ ಗೆಗೆ ಚಾಲನೆ ನೀಡಿ ಮಾತನಾಡಿ 'ರೈತಾಪಿ ಜನರು ಎತ್ತುಗಳನ್ನೇ ಬಸವಣ್ಣ ದೇವರು ಎಂದು ನಂಬಿಕೊಂಡು ಬಂದಿದ್ದು ಬಸವ ಜಯಂತಿಯಂದು ಅವುಗಳ ಮೆರವಣಗೆ ಮಾಡುವ ಮೂಲಕ ಸಂಭ್ರಮಿಸಲಾಗುತ್ತಿದೆ" ಎಂದರು.

ಶೃಂಗಾರಗೊಂಡಿದ್ದ 90ಕ್ಕೂ ಅಧಿಕ ಜೋಡೆತ್ತುಗಳು ಹಾಗೂ ಬಸವಣ್ಣನವರ ಮೂರ್ತಿಯ ಪಲ್ಲಕ್ಕಿಯ ಮೆರವಣಗೆಯು ವಿವಿಧ ವಾದ್ಯಗಳೊಂದಿಗೆ ರಾಮಲಿಂಗೇಶ್ವರ ದೇವಸ್ಥಾನ ಬಳಿಯಲ್ಲಿ ಪ್ರಾರಂಭಗೊಂಡು ಪಟ್ಟಣದ ಪ್ರಮುಖ ರಸ್ಥೆಗಳಲ್ಲಿ ಸಾಗಿ ಬಸವೇಶ್ವರ ಪುತ್ಥಳಿಯ ವೃತ್ತದ ಮೂಲಕ ಸಹಕಾರಿ ಸಂಘದ ಬಳಿಯಲ್ಲಿ ಸಮಾರೋಪಗೊಂಡಿತು.

ಜೋಡೆತ್ತಿನೊಂದಿಗೆ ಬಂದಿದ್ದ ರೈತರಿಗೆ ರೂ.1500 ಬೆಲೆಯ 2 ಸ್ಟೀಲ್ ಬುಟ್ಟಿ, 1 ಸ್ಟೀಲ್ ಬಕೇಟ್ ಹಾಗೂ 2 ಟೀಶರ್ಟಗಳನ್ನು ಸಂಘದವರು ನೀಡಿ ಪ್ರೋತ್ಸಾಹಿಸಿದರು. ಸಂಘದ ಉಪಾಧ್ಯಕ್ಷ ಶಿವರುದ್ರ ಪಾಟೀಲ, ನಿರ್ದೇಶಕರಾದ ಬಸಗೌಡ ಪಾಟೀಲ, ಬಸವಣ್ಣೆಪ್ಪ ಗೋರೋಶಿ, ಮಲ್ಲಪ್ಪ ಖಾನಾಪೂರ, ರಾಮಪ್ಪ ದಬಾಡಿ, ಹನಮಂತ ಪರಕನಟ್ಟಿ, ಸುಭಾಸ ಖಾನಾಪೂರ, ಬಸಪ್ಪ ಹೆಬ್ಬಾಳ, ಭೀಮಪ್ಪ ಕಡಾಡಿ, ಬಾಳಣ್ಣ ಕಂಕಣವಾಡಿ, ಪ್ರಕಾಶ ಕಲಾಲ, ಮಹಮ್ಮದಶೇಫಿ ಮೋಕಾಶಿ, ಕಲ್ಲೋಳೆಪ್ಪ ತೆಳಗಡೆ, ಪ್ರಧಾನ ವ್ಯವಸ್ಥಾಪಕ ಹಣಮಂತ ಖಾನಗೌಡ್ರ, ಬಸವ ಕೇಂದ್ರ ಅಧ್ಯಕ್ಷ ಶಂಕರ ಬೆಳಕೂಡ ಉಪಸ್ಥಿತರಿದ್ದರು.



ಮೂಡಲಗಿ: ತಾಲ್ಲೂಕಿನ ಕಲ್ಲೋಳಿಯಲ್ಲಿ ವಿಶ್ವಗುರು ಬಸವೇಶ್ವರರ ಜಯಂತಿ ಅಂಗವಾಗಿ ಬಸವೇಶ್ವರ ಸೌಹಾರ್ದ ಸಹಕಾರಿ ಸಂಘದಿಂದ ಆಯೋಜಿಸಿದ್ದ ಜೊಡೆತ್ತಿನ ಮೆರವಣಗೆಗೆ ಸಂಘದ ಅಧ್ಯಕ್ಷ ಬಾಳಪ್ಪ ಬ. ಬೆಳಕೂಡ ಚಾಲನೆ ನೀಡಿದರು.

# ಬಸವಣ್ಣ ಸಾಮಾಜಿಕ ಸಮಾನತೆಯ ಹರಿಕಾರ : ರಮೇಶ ಅಳಗುಂಡಿ



**ವರದಿ: ಅಡಿವೇಶ ಮುಧೋಳ.**

**ಬೆಳಗಾವಿ ವಾರ್ತೆ ಬೆಟಗೇರಿ:** ಬಸವಣ್ಣನವರು ಭಾರತ ಇತಿಹಾಸದಲ್ಲಿ ಸಾಮಾಜಿಕ ಸಮಾನತೆ ಹರಿಕಾರರಾಗಿ ಗುರುತಿಸಿಕೊಂಡಿದ್ದಾರೆ. ಕಾಯಕ ತತ್ವ ಬೋಧಿಸಿದ ಮಹಾನ ಚೇತನರಾಗಿದ್ದರು ಎಂದು ಗೋಕಾಕ ತಾಲೂಕಿನ ಬೆಟಗೇರಿ ವಿವಿಡಿ ಸರಕಾರಿ ಪ್ರೌಢ ಶಾಲೆಯ ಮುಖ್ಯೋಪಾಧ್ಯಯ ರಮೇಶ ಅಳಗುಂಡಿ ಹೇಳಿದರು.

ಗೋಕಾಕ ತಾಲೂಕಿನ ಬೆಟಗೇರಿ ವಿವಿಡಿ ಸರಕಾರಿ ಪ್ರೌಢ ಶಾಲೆಯಲ್ಲಿ ಏ.20ರಂದು ನಡೆದ ಬಸವ ಜಯಂತಿ ಆಚರಣೆ ಕಾರ್ಯಕ್ರಮದಲ್ಲಿ ಮಾತನಾಡಿ, ಬಸವಣ್ಣನವರ ಬದುಕಿನ ತತ್ವಾದರ್ಶಗಳನ್ನು ಪ್ರತಿಯೊಬ್ಬರು ತಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕೆಂದರು.

ಸ್ಥಳೀಯ ಪ್ರೌಢ ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷ ರಾಮಣ್ಣ ನೀಲಣ್ಣವರ ಕಾರ್ಯಕ್ರಮದ ನೇತೃತ್ವ ವಹಿಸಿ ಬಸವಣ್ಣನವರ ಭಾವಚಿತ್ರಕ್ಕೆ ಮಹಾಪೂಜೆ, ಪುಷ್ಪಾರ್ಪನೆ ನೆರವೇರಿಸಿದ ಬಳಿಕ ಸಿಹಿ ವಿತರಿಸಲಾಯಿತು.

ಬಸವರಾಜ ಪಣದಿ, ಮಂಜುನಾಥ ದಾವಣೆ, ದುಂಡಪ್ಪ ದೇಯಣ್ಣವರ, ರಮೇಶ ಕತ್ತಿ, ರಮೇಶ ನೀಲಣ್ಣವರ, ಮಲ್ಹಾರಿ ಪೋಳ, ಶಾಲೆಯ ಎಸ್‌ಡಿಎಂಸಿ ಸದಸ್ಯರು, ಇಲ್ಲಿಯ ಬಸವ ಅಭಿಮಾನಿಗಳು, ಶಾಲೆಯ ಸಹ ಶಿಕ್ಷಕರು, ಅತಿಥಿ ಶಿಕ್ಷಕರು, ವಿದ್ಯಾರ್ಥಿಗಳು, ಇತರರು ಇದ್ದರು.

# ಸಾಮೂಹಿಕ ವಿವಾಹಗಳಿಂದ ದುಂದು ವೆಚ್ಚದ ವಿವಾಹಗಳಿಗೆ ಕಡಿವಾಣ ಹಾಕಲು ಸಾಧ್ಯ



ಉಗರಗೋಳದ ಬಸವೇಶ್ವರ ದೇವಸ್ಥಾನದಲ್ಲಿ ದಾಂಪತ್ಯ ಜೀವನಕ್ಕೆ ಕಾಲಿಟ್ಟ ನವಜೋಡಿಗೆ ಶುಭ ಆಶೀರ್ವಾದ ಮಾಡುತ್ತಿರುವ ಪೂಜ್ಯರು & ಗುರು ಹಿರಿಯರು.

**ಬೆಳಗಾವಿ ವಾರ್ತೆ ಉಗರಗೋಳ:** ಸಾಮೂಹಿಕ ವಿವಾಹಗಳಿಂದ ದುಂದು ವೆಚ್ಚದ ವಿವಾಹಗಳಿಗೆ ಕಡಿವಾಣ ಹಾಕಲು ಸಾಧ್ಯ ಎಂದು ಉಗರಗೋಳ ನಿರ್ವಾಣೇಶ್ವರಮಠದ ಪೀಠಾಧಿಪತಿ ಮಹಾಂತ ದೇವರು ಹೇಳಿದರು.

ಸವದತ್ತಿ ತಾಲೂಕಿನ ಉಗರಗೋಳ ಗ್ರಾಮದಲ್ಲಿ ಸೋಮವಾರ ಶ್ರೀಬಸವೇಶ್ವರ ದೇವಸ್ಥಾನದಲ್ಲಿ, ಶ್ರೀಬಸವೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ, ಶ್ರೀಬಸವೇಶ್ವರ ಜಾತ್ರಾ ಕಮೀಟಿಯಿಂದ 3 ಉಚಿತ ಸಾಮೂಹಿಕ ವಿವಾಹಗಳ ಸಾನಿಧ್ಯವಹಿಸಿ ಮಾತನಾಡಿದ ಅವರು ನಿಮ್ಮ ಬಾಳಿನಲ್ಲಿ ಬೇವಿನ ಕಹಿ ನೆನಪು ಮರೆಯಾಗಲಿ, ಕಹಿ ಹಿಂದಿನ ಅನುಭವಗಳು ನಿಮ್ಮ ಮನದಲ್ಲಿ ಸೆರೆಯಾಗಲಿ, ಸಿಹಿ ಬೆಲ್ಲದ ಖುಷಿಯು ನಿಮ್ಮ ಮನ ಸೇರಲಿ, ಕತ್ತಲು ತುಂಬಿದ ದಾರಿಯಲಿ ಬೆಳಕು ಮೂಡಿ ಸುಖ ಜೀವನ ನಿಮ್ಮದಾಗಲಿ ಎಂದು ಹಾರೈಸಿದರು.

ಉಗರಗೋಳ ರಾಮಾರೂಢಮಠದ ಬ್ರಹ್ಮಾರೂಢ ಪೂಜ್ಯರು ಸಾನಿಧ್ಯವಹಿಸಿದ್ದರು. ಯಲ್ಲಮ್ಮ ದೇವಸ್ಥಾನ ಅಭಿವೃದ್ಧಿ ಪ್ರಾಧಿಕಾರದ ಸದಸ್ಯ ಶಿದ್ದನಗೌಡ ಗೂಡರಾಶಿ, ನಿಂಗನಗೌಡ ಹರಳಕಟ್ಟಿ, ನಿಂಗಪ್ಪ ಗೊವಪ್ಪನವರ, ರಾಜನಗೌಡ ಟೋಪಣ್ಣವರ, ಬಸನಪ್ಪ ಅಳಗೋಡಿ, ಗೋವಿಂದಗೌಡ ತಿಪರಾಶಿ, ವಿಜಯ ನರಗುಂದ, ಅಪ್ಪು ತೋಟಗಿ, ಶಶಿಧರ ಅಂಗಡಿ, ವೀರಭದ್ರ ಗುಳೇದ, ಯಲ್ಲಪ್ಪ ಅಳಗೋಡಿ, ಮಲ್ಲಿಕಾರ್ಜುನ ಗೋವಪ್ಪನವರ, ಡಿ ಎಸ್ ಕೊಪ್ಪದ, ಶಂಕ್ರಯ್ಯ ಮಠಪತಿ, ಫಕ್ಕೀರಗೌಡ ಗಡಾದಗೌಡ್ರ, ಸಂತೋಷ ಕಲಾಲ, ಬಸನಪ್ಪ ರೂಗಿ, ನಂದಕುಮಾರ, ಚಂದರಗಿ. ಗ್ರಾಮದ ಗುರು-ಹಿರಿಯರು, ಗ್ರಾಮದ ಯುವಕ ಸಂಘದ ಸರ್ವ ಸದಸ್ಯರು, ಆಶಾ ಕಾರ್ಯಕತೆಯರು ಉಪಸ್ಥಿತರಿದ್ದರು.

ರುದ್ರಮುನಿ ತೊರಗಲ್ಲಮಠ ಬಸಯ್ಯ, ಮಠಪತಿ, ಶಂಕ್ರಯ್ಯ ಮಠಪತಿ ವೈದಿಕತ್ವದಲ್ಲಿ ನವಜೋಡಿಗಳು ದಾಂಪತ್ಯ ಜೀವನಕ್ಕೆ ಕಾಲಿಟ್ಟರು.

ಉಚಿತ ಸಾಮೂಹಿಕ ವಿವಾಹವಾದ ವಧು-ವರರ ಬೀಗರರಿಗೆ ಪರಶುರಾಮ ಯುವಕ ಮಂಡಳದ ಆವರಣದಲ್ಲಿ ಊಟದ ವ್ಯವಸ್ಥೆ ಮಾಡಲಾಗಿತ್ತು. ಎಲ್ಲರೂ ರುಚಿಕಟ್ಟಾದ ಊಟ ಸವಿಯುವ ಮೂಲಕ ಸಂಭ್ರಮಿಸಿ ನವ ವಧುಗಳನ್ನು ಹರಸಿದರು.

# ಬಸವಣ್ಣನವರು ಸಕಲ ಜೀವಿಗಳಿಗೆ ಶ್ರೇಯಸ್ಸು ಬಯಸಿದ್ದರು: ಬಸವಂತ ಕೋಣಿ



**ವರದಿ: ಅಡಿವೇಶ ಮುಧೋಳ.**

**ಬೆಳಗಾವಿ ವಾರ್ತೆ ಬೆಟಗೇರಿ:** ಸಮಾಜದಲ್ಲಿ ಸಮಾನತೆ ತರಲು ಶ್ರಮಿಸಿದ ಬಸವಣ್ಣನವರು ವಿಶ್ವದ ಬಹುದೊಡ್ಡ ಸಮಾಜ ಸುಧಾರಕರಾಗಿದ್ದಾ ರೆ. ಬಸವಣ್ಣನವರು ಸಕಲ ಜೀವಿಗಳಿಗೆ ಶ್ರೇಯಸ್ಸು ಬಯಸಿದ್ದರು. ಎಂದು ಗೋ ಕಾಕ ತಾಲೂಕಿನ ಬೆಟಗೇರಿ ಗ್ರಾಮದ ಮಾಜಿ ಗ್ರಾಪಂ ಅಧ್ಯಕ್ಷ ಬಸವಂತ ಕೋಣಿ ಹೇಳಿದರು.

ಗೋಕಾಕ ತಾಲೂಕಿನ ಬೆಟಗೇರಿ ಗ್ರಾಮದ ಬಸವ ಅಭಿಮಾನಿ ಬಳಗದ ಸಹಯೋಗದಲ್ಲಿ ಏ.20ರಂದು ನಡೆದ ಬಸವ ಜಯಂತಿ ಆಚರಣೆ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿ, ಬಸವಣ್ಣನವರು ವಚನಗಳನ್ನು ರಚಿಸಿ ಜಗತ್ತಿಗೆ ಅದ್ಭುತವಾದ ಕೊಡುಗೆ ನೀಡಿದ್ದಾರೆ. ಇಂದು ಪ್ರತಿಯೊಬ್ಬರು ಬಸವಣ್ಣನವರ ತತ್ವಾದರ್ಶಗಳನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕೆಂದರು.

ಸ್ಥಳೀಯ ವೇದಮೂರ್ತಿ ಸಂಗಯ್ಯ ಹಿರೇಮಠ ಷಟಸ್ಥಲ್ ಧ್ವಜಾರೋಹಣ ನೆರವೇರಿಸಿದರು. ಗೋಕಾಕ ವಕೀಲರ ಸಂಘದ ಮಾಜಿ ಅಧ್ಯಕ್ಷ, ನ್ಯಾಯವಾದಿ ಎಂ.ಐ.ನೀಲಣ್ಣವರ ಅವರು ಸ್ಥಳೀಯ ಅಶ್ವಾರೊಢ ಬಸವೇಶ್ವರ ವೃತ್ತದಿಂದ ಇಲ್ಲಿಯ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನ ವೃತ್ತದವರೆಗೆ ಸಕಲ ವಾದ್ಯಮೇಳಗಳೊಂದಿಗೆ ವಿಶ್ವಗುರು ಬಸವೇಶ್ವರರ ಭಾವ ಚಿತ್ರ, ಶೃಂಗರಿಸಿದ ಜೋಡೆತ್ತುಗಳ ಭವ್ಯ ಮೆರವಣಿಗೆಗೆ ಚಾಲನೆ ನೀಡಿದರು. ವೇದಮೂರ್ತಿ ಈರಯ್ಯ ಹಿರೇಮಠ ಕಾರ್ಯಕ್ರಮದ ನೇತೃತ್ವ ವಹಿಸಿ ಅಶ್ವಾರೊಢ ಬಸವೇಶ್ವರ ವೃತ್ತದಲ್ಲಿರುವ ಬಸವಣ್ಣನವರ ಮೂರ್ತಿಗೆ ಮಹಾಪೂಜೆ, ಪುಷ್ಪಾರ್ಪನೆ ನೆರವೇರಿಸಿದರು. ಸ್ಥಳೀಯ ಬಸವ ಅಭಿಮಾನಿ ಬಳಗದ ಪ್ರಧಾನ ಸಂಚಾಲಕ ಈಶ್ವರ ಬಳಿಗಾರ ಅಧ್ಯಕ್ಷತೆ ವಹಿಸಿದ್ದರು.

ಸ್ಥಳೀಯ ಬಸವ ಅಭಿಮಾನಿ ಬಳಗದವರ ಸಹಯೋಗದಲ್ಲಿ ಇಲ್ಲಿಯ ಅಶ್ವಾರೊಢ ಬಸವೇಶ್ವರ ವೃತ್ತದಲ್ಲಿರುವ ಬಸವಣ್ಣನ ಮೂರ್ತಿಗೆ ರಂಗುರಂಗಿನ ವಿದ್ಯುತ್ ದೀಪಗಳ ಅಲಂಕಾರ, ವೃತ್ತದ ಕಟ್ಟಡಕ್ಕೆ ನೂತನ ಸುಣ್ಣ, ಬಣ್ಣಗಳಿಂದ ಕೆಲವು ದಿನಗಳ ಕಾಲ ಇಲ್ಲಿಯ ಅಶ್ವಾರೊಢ ಬಸವೇಶ್ವರ ವೃತ್ತ ಶೃಂಗಾರಮಯವಾಗಿ ಕಂಗೊಳಿಸುತ್ತಿದೆ.


ಲಕ್ಷ್ಮಣ ನೀಲಣ್ಣವರ, ಸುಭಾಷ ಕರೆಣ್ಣವರ, ಮಲ್ಲಪ್ಪ ಪಣದಿ, ದುಂಡಪ್ಪ ಮಾಳೇದ, ಮಹಾಂತೇಶ ಮಾಳೇದ, ಮುತ್ತೆಪ್ಪ ದೇಯಣ್ಣವರ, ಶಂಕರ ತೋಂಡಿಕಟ್ಟಿ, ಬಸವರಾಜ ಪಣದಿ, ಚಂದ್ರಶೇಖರ ಹೂಗಾರ, ಈಶ್ವರ ಬಡಿಗೇರ, ಬಸವರಾಜ ಮಾಳೇದ. ಮಹಾಂತೇಶ ಸಿದ್ನಾಳ, ಈರಪ್ಪ ದೇಯಣ್ಣವರ, ರಾಮಣ್ಣ ನೀಲಣ್ಣವರ, ಮಹಾಂತೇಶ ಮಾಳೇದ, ಬಾಳಪ್ಪ ಕನೋಜಿ, ಈರಪ್ಪ ಕಂಬಿ, ಸುರೇಶ ನೀಲಣ್ಣವರ, ಸ್ಥಳೀಯ ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು, ಸದಸ್ಯರು, ಬಸವ ಅಭಿಮಾನಿ ಬಳಗದ ಸದಸ್ಯರು, ಇತರರು ಇದ್ದರು.

# ಶ್ರೀಬಸವೇಶ್ವರ ಭಾವಚಿತ್ರಕ್ಕೆ ಪೂಜೆ ಸಲ್ಲಿಕೆ

**ಬೆಳಗಾವಿ ವಾರ್ತೆ ಉಗರಗೋಳ:** ನಮ್ಮ ಯುವ ಜನಾಂಗ, ಕೈಯಲ್ಲಿರುವ ರೇಖೆಗಳನ್ನೋ, ಅಥವಾ ಹಣೆಯಲ್ಲಿ ಕಾಣದ ಹಣೆಬರಹ ವನ್ನೋ, ನಂಬಿ ಕುರುಡು ಜೀವನ ನಡೆಸೋದಕ್ಕಿಂತ, ನಮ್ಮಲ್ಲಿರುವ ಜ್ಞಾನವನ್ನು ಮತ್ತು ಮನಸ್ಸಿನಲ್ಲಿರುವ ಆತ್ಮ ವಿಶ್ವಾಸ ನಂಬಿ, ಅರ್ಥಪೂರ್ಣ ಜೀವನ ನಡೆಸಿದರೆ ಯಾವುದು ಅಸಾಧ್ಯವಲ್ಲ. ಎಂದು ಯಲ್ಲಮ್ಮ ದೇವಸ್ಥಾನ ಪ್ರಾಧಿಕಾರದ ಕಾರ್ಯದರ್ಶಿ ಪ್ರಭಾವತಿ ಫಕಿರಪೂರ ಹೇಳಿದರು.

ಶ್ರೀಕ್ಷೇತ್ರ ಯಲ್ಲಮ್ಮನ ಗುಡ್ಡದಲ್ಲಿ ಶ್ರೀ ಬಸವೇಶ್ವರ ಜಯಂತಿ ಅಂಗವಾಗಿ ಶ್ರೀಬಸವೇಶ್ವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾತನಾಡಿದರು.

ಆರ್ ಎಸ್ ಸವದತ್ತಿ, ಸಂಗಮೇಶ ಪಂಪನವರ, ಗೊವಿಂದರಾವ್ ಕುಲಕಣಿರ್ಣ, ಅನಿಲ ಗುಡಿಮನಿ, ಮೌಳೇಶ ಸುಣಗಾರ, ಪಕ್ಕೀರಪ್ಪ ಯಕ್ಕುಂಡಿ, ಗುರುನಗೌಡ ರೇಣ್ಕೀಗೌಡ್ರ, ಸತೀಶ ಚಿರಚನವರ, ಈಶ್ವರ ಕಗದಾಳ, ಪಂಡಿತ ಯಡೂರಯ್ಯ ಹಾಗೂ ದೇವಸ್ಥಾನ ಸಿಬ್ಬಂದಿ ಇದ್ದರು.



ಶ್ರೀಕ್ಷೇತ್ರ ಯಲ್ಲಮ್ಮನ ಗುಡ್ಡದಲ್ಲಿ ಶ್ರೀ ಬಸವೇಶ್ವರ ಜಯಂತಿ ಅಂಗವಾಗಿ ಶ್ರೀಬಸವೇಶ್ವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿದ ಪ್ರಭಾವತಿ ಫಕಿರಪೂರ ಹಾಗೂ ಇತರರು ಇದ್ದಾರೆ.



**ಬೆಳಗಾವಿ ವಾರ್ತೆ ಗೋಕಾಕ:** ಇಲ್ಲಿನ ಇನರವಿಲ್ಡ್ ಸಂಸ್ಥೆ ಹಾಗೂ ಸ್ವರ-ಸಂಗಮ ಇವುಗಳ ಸಂಯುಕ್ತಾಶ್ರಯದಲ್ಲಿ ಶನಿವಾರದಂದು ನಗರದ ರೋಟರಿ ಸಭಾಂಗಣದಲ್ಲಿ ನಾಗಸರಸ್ವತಿ ಆಶಾ ಭೋಸಲೆ ಸ್ಮರಣಾರ್ಥ ಆಯೋಜಿಸಿದ್ದ ಸ್ವರ ಶೃದ್ಧಾಂಜಲಿ ಕಾರ್ಯಕ್ರಮವನ್ನು ಗಣ್ಯರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಸಿರಿಗನ್ನಡ ಮಹಿಳಾ ವೇದಿಕೆಯ ರಾಜ್ಯಾಧ್ಯಕ್ಷೆ ಶ್ರೀಮತಿ ರಜನಿ ಜಿರಗ್ಯಾಳ, ಡಾ.ಶೃಸ್ಮೃತ್ ಕಡಳಗೀಕರ, ಇನರವಿಲ್ಡ ಸಂಸ್ಥೆಯ ಅಧ್ಯಕ್ಷೆ ಅನುಪಾ ಕೌಶಿಕ್, ಸ್ವರಸಂಗಮದ ಅಧ್ಯಕ್ಷೆ ವಿದ್ಯಾ ಮಗದುಮ್ಮ ಇದ್ದರು.

# ಸಾಂಪ್ರದಾಯಿಕ ಹಬ್ಬದ ಮಹತ್ವ ಪಡೆದುಕೊಂಡು ಚಿಣ್ಣರರು



**ಬೆಳಗಾವಿ ವಾರ್ತೆ ಧಾರವಾಡ:** ಬಗೆ ಬಗೆಯ ತಿಂಡಿ–ತಿನಿಸು, ಜಾನಪದ ನೃತ್ಯ, ಹಾಡುಗಳು, ಹಳ್ಳಿಯ ಸೀರೆ, ಲಂಗದಾವನಿ, ಕುರ್ತಾ ಸೇರಿದಂತೆ ಸಾಂಪ್ರದಾಯಿಕ ಉಡುಗೆಗಳ ನ್ನು ತೊಟ್ಟು ನಗು ನಗುತ್ತ ಓಡಾಡುತ್ತಿರುವ ಪುಟ್ಟ ಪೋರರ ದೃಶ್ಯಗಳು...

ಹೌದು.. ಈ ದೃಶ್ಯಗಳು ಕಂಡು ಬಂದದ್ದು ಧಾರವಾಡ ರಂಗಾಯಣದ ಮಕ್ಕಳ ಶಿಬಿರದಲ್ಲಿ. ಜಾತಿ, ಭೇದ–ಭಾವ, ಬಡವ–ಶ್ರೀಮಂತ ಎಂಬ ಭಾವನೆಗಳನ್ನು ತೊರೆದು ಕೃಷಿ ಸಂಸ್ಕೃತಿ, ಧಾರ್ಮಿಕ ನಂಬಿಕೆ ಮತ್ತು ಸಾಮಾಜಿಕ ಐಕ್ಯತೆಯನ್ನು ಸಾರುವ ಅಲ್ಲಿಕೇರಿಯನ್ನು ಚಿಣ್ಣರಮೇಳದ ಭಾಗವಾಗಿ ಆಚರಿಸಲಾಯಿತು. ಉತ್ತರ ಕರ್ನಾಟಕದ ಗ್ರಾಮೀಣ ಪ್ರದೇಶಗಳಲ್ಲಿ ಸಾಂಪ್ರದಾಯಿಕ ಮತ್ತು ಸಾಂಸ್ಕೃತಿಕ ಹಬ್ಬವಾಗಿ ಅಲ್ಲಿಕೇರಿಯನ್ನು ಆಚರಿಸಲಾಗುತ್ತದೆ. ಇದು ಸಹಬಾಳ್ವೆ ಮತ್ತು ಏಕತೆಯ ಸಂಕೇತವಾಗಿದೆ.

ನಾಡಿಗೆ ಮಳೆ, ಬೆಳೆ ಸಮೃದ್ಧಿಯಾಗಿ ಸಿಗಲಿ ಎಂದು ಊರಿನ ಜನರು, ಕುಟುಂಬದವರೆಲ್ಲರೂ ಹೋಲ ಗಳಲ್ಲಿ ಸೇರಿ ದೇವರಲ್ಲಿ ಪ್ರಾರ್ಥಿಸುತ್ತಾರೆ. ಕೃಷಿ ಆಧಾರಿತ ಸಂಸ್ಕೃತಿಯ ಪ್ರತೀಕವೂ ಅಲ್ಲಿಕೇರಿ ಹಬ್ಬವಾಗಿದೆ.

ದಿನಕಳೆದಂತೆ ಈ ಹಬ್ಬವು ಮರೆಯಾಗುತ್ತಿರುವ ಇಂದಿನ ಸಂದರ್ಭದಲ್ಲಿ ಮಕ್ಕಳಿಗೆ ಗ್ರಾಮೀಣ ಸಂಪ್ರದಾಯಗಳ ಕುರಿತು ತಿಳಿಸುವ ಪ್ರಯತ್ನವನ್ನು ಧಾರವಾಡ ರಂಗಾಯಣ ಮಾಡಿದೆ. ಜಾನಪದ ಹಾಡುಗಾರರಾದ ರಾಮು ಮೂಲಗಿ ಅವರ ಅಲ್ಲಿಕೇರಿಯ ಕುರಿತ ಹಾಡುಗಳು, ರಂಗಾಯಣದ ರೆಪರ್ಟರಿ ಕಲಾವಿದರ ದೊಡ್ಡಾಟದ ಕುಣಿತಗಳು, ಜಾನಪದ ನೃತ್ಯಗಳು ಹಾಗೂ ಹಾಡುಗಳು ಪಾಲಕರು ಹಾಗೂ ಮಕ್ಕಳ ಮನಸನ್ನು ಮುದಗೊಳಿಸಿದವು. ಶಿಬಿರದ ಮಕ್ಕಳು ತಮ್ಮ ಪಾಲಕರೊಂದಿಗೆ ಈ ಹಬ್ಬವನ್ನು ಆಚರಿಸಿ, ಮನೆಯಿಂದ ಪಾಲಕರು ತಯಾರಿಸಿಕೊಂಡು ಬಂದ ಕರ್ಚಿಕಾಯಿ, ಗೋದಿಹುಗ್ಗಿ, ಬಜ್ಜಿಗಳು, ರೊಟ್ಟಿ, ವಿಧವಿಧವಾದ ಕಾಳು ಪಲ್ಯಗಳು, ಉಂಡೆಗಳು ಸೇರಿದಂತೆ ವಿವಿಧ ತರಹದ ಅಡುಗೆಗಳ ಸವಿಯನ್ನು ಒಟ್ಟಾಗಿ ಕುಳಿತು ಸವಿಯುವದರ ಮೂಲಕ ಅಲ್ಲಿಕೇರಿಯ ಮಹತ್ವವನ್ನು ತಿಳಿದುಕೊಂಡರು.

ಈ ಸಂದರ್ಭದಲ್ಲಿ ಚಿಣ್ಣರಮೇಳದ ಸಂಚಾಲಕರಾದ ಅರುಣಕುಮಾರ ಮೇದಾರ, ತರಬೇತುದಾರರಾದ ರಾಜ್ ಕವಡೆನವರ, ಸಂಗೀತಗಾರರಾದ ಸುನಂದಾ ನಿಂಬನಗೌಡರ, ರಂಗಾಯಣ ರೆಪರ್ಟರಿ ಕಲಾವಿದರು ಹಾಗೂ ಸಿಬ್ಬಂದಿ ಸೇರಿದಂತೆ ಪಾಲಕರು ಇದ್ದರು.

# ಶ್ರೀ ಬಸವೇಶ್ವರ ಜಯಂತಿ



**ಬೆಳಗಾವಿ ವಾರ್ತೆ ಲಕ್ಷ್ಮೇಶ್ವರ:**"ಜಗ ಬೆಳಗಿದ ಮಹಾ ಬೆಳಕು ವಿಶ್ವಗುರು ಬಸವೇಶ್ವರರು.12ನೇ ಶತಮಾನದಲ್ಲಿಯೇ ಸಾಮಾಜಿಕ, ರಾಜಕೀಯ, ಧಾರ್ಮಿಕ ಹಾಗೂ ಕಾಯಕ ಕ್ರಾಂತಿಗೆ ನಾಂದಿ ಹಾಡಿದ ಅಪ್ರತಿಮ ಹೋರಾಟಗಾರ, ಸಮಾಜ ಸುಧಾರಕ, ಧಾರ್ಮಿಕ ಗುರು ಹಾಗೂ ಕ್ರಾಂತಿಕಾರಿ" ಎಂದು ಹಿರಿಯ ಸಾಹಿತಿ ಎಸ್.ಎಫ್.ಆದಿ ಅಭಿಪ್ರಾಯ ಪಟ್ಟರು. ಅವರು ಲಕ್ಷ್ಮೇಶ್ವರ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಎಮ್.ಎಸ್.ಚಾಕಲಬ್ಬಿ ಅವರ ಸ್ವಗೃಹ ಸನ್ಮಿತ ಸದನದಲ್ಲಿ ಹಮ್ಮಿಕೊಂಡ ಮಾಸದ ಮಾತು ಕಾರ್ಯಕ್ರಮ ಸರಣಿಯ 33ನೇ ಕಾರ್ಯಕ್ರಮ 'ನಾಡಿನ ಸಾಂಸ್ಕೃತಿಕ ನಾಯಕ ವಿಶ್ವಗುರು ಬಸವೇಶ್ವರ ಜಯಂತಿ' ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡುತ್ತಿದ್ದರು.

ಕಾರ್ಯಕ್ರಮ ಉದ್ಘಾಟಿಸಿದ ಪುರಸಭೆ ಮಾಜಿ ಸದಸ್ಯ ಪ್ರವೀಣ ಬಾಳಿಕಾಯಿ ಮಾತನಾಡಿ "ವಚನಗಳ ಮೂಲಕ ಬಸವಣ್ಣನವರು ಅಂದಿನ ಜಾತಿ ವ್ಯವಸ್ಥೆ, ಮೇಲು,ಕೀಳು,ಬಡವ, ಶ್ರೀಮಂತ,ಅಕ್ಷರಸ್ಥ,ಅನಕ್ಷರಸ್ಥ, ಗಂಡು, ಹೆಣ್ಣು ಎನ್ನುವ ಭೇದ ಭಾವಗಳನ್ನು ತೊಡೆದು ಹಾಕಿ ಸಮಾನತೆ ಸಾರಿದರು. ಎಲ್ಲ ಸಮುದಾಯದ ವ್ಯಕ್ತಿಗಳನ್ನೊಳಗೊಂಡ ಅನುಭವ ಮಂಟಪ ಸ್ಥಾಪಿಸಿದರು. ಇದುವೇ ಜಗತ್ತಿನ ಮೊದಲ ಸಂಸತ್ ಆಗಿದೆ"ಎಂದರು. ವಿಶ್ರಾಂತ ದೈಹಿಕ ಪರಿವೀಕ್ಷಣಾಧಿಕಾರಿ ಆರ. ಎನ್ ಪಂಚಭಾವಿ ಮಾತನಾಡಿದರು. ಪ್ರಾಸ್ತಾವಿಕವಾಗಿ ಮಾತನಾಡಿದ ಲಕ್ಷ್ಮೇಶ್ವರ ತಾಲೂಕಾ ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ಈಶ್ವರ ಮೆಡ್ಲೇರಿ "ಲಕ್ಷ್ಮೇಶ್ವರ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಈಗಾಗಲೇ 175 ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಸಂಘಟನೆ ಮಾಡಿ ಮತ್ತಷ್ಟು ರಚನಾತ್ಮಕ ಕಾರ್ಯಕ್ರಮವನ್ನು ಯೋಜಿಸಿದೆ. ಇದಕ್ಕೆ ಲಕ್ಷ್ಮೇಶ್ವರ ತಾಲೂಕಾ ಪರಿಸರದ ಸಾಹಿತಿಗಳು,ಸಾಹಿತ್ಯಾಭಿಮಾನಿಗಳು,ಪತ್ರಿಕಾ ವರದಿಗಾರರು ಹಾಗೂ ಕನ್ನಡಾಭಿಮಾನಿಗಳ ಸಹಕಾರ ಹಾಗೂ ಮಾರ್ಗದರ್ಶನವೇ ಮುಖ್ಯ ಕಾರಣ" ಎಂದು ಸ್ಮರಿಸಿದರು.

ಕಾರ್ಯಕ್ರಮದ ಉದ್ಘಾಟಕರಲ್ಲೊಬ್ಬರಾದ ಹಿರಿಯ ಕಾಯಕ ಜೀವಿ ಶಿವಪುತ್ರಪ್ಪ ಚಾಕಲಬ್ಬಿ, ಉಪನ್ಯಾಸ ನೀಡಿದ ಹಿರಿಯ ಸಾಹಿತಿ ಎಸ್.ಎಫ್.ಆದಿ, ವಿಶ್ರಾಂತ ಶಿಕ್ಷಕಿ ಎಸ್.ಎಂ. ಹಾಳದೋಟದ ರವರನ್ನು ಸನ್ಮಾನಿಸಲಾಯಿತು.

ಕು. ಶ್ರೀನಿಧಿ ಶಂಕರ ಶಿಳ್ಳಿನ, ವಿಶ್ರಾಂತ ಶಿಕ್ಷಕ ವಿ.ಎಂ. ಹೂಗಾರ ಬಸವೇಶ್ವರರ ವಚನ ಗಾಯನ ಕಾರ್ಯಕ್ರಮ ನಡೆಸಿಕೊಟ್ಟರು. ಕಾರ್ಯಕ್ರಮದ ವೇದಿಕೆಯಲ್ಲಿ ಆತಿಥೇಯರಾದ ರೇಣುಕಾ ಮಂಜುನಾಥ್ ಚಾಕಲಬ್ಬಿ, ವಿಶ್ರಾಂತ ಶಿಕ್ಷಕ ಕೆ.ಓ.ಹೂಲಿಕಟ್ಟಿ, ಸಂಸ್ಕೃತಿ ಚಿಂತಕ ರಮೇಶ ಹಾಳದೋಟದ, ಹಿರಿಯರಾದ ನಿಂಗಪ್ಪ ಕಲ್ಯಾಣಿ, ನಿವೃತ್ತ ನಿರ್ವಾಹಕ ನಾಗಪ್ಪ ಅಂಗಡಿ, ಎ.ಪಿ.ಎಂ.ಸಿ ಕಾರ್ಯದರ್ಶಿ ವಿ.ಡಿ.ಪಾಟೀಲ, ವಿಶ್ರಾಂತ ಶಿಕ್ಷಕ ಎಂ.ಎಸ್.ಕೊಟಗಿ ಉಪಸ್ಥಿತರಿದ್ದರು.

ಶ್ರೀಮತಿ ರೇಣುಕಾ ಮಂಜುನಾಥ ಚಾಕಲಬ್ಬಿ ಪ್ರಾರ್ಥಿಸಿದರು. ಕ.ಸಾ.ಪ ಸಲಹಾ ಸಮಿತಿಯ ಎಸ್.ಬಿ.ಅಣ್ಣಿಗೇರಿ ಸ್ವಾಗತಿಸಿದರು. ಕ.ಸಾ.ಪ ಕಾರ್ಯದರ್ಶಿ ಮಂಜುನಾಥ ಚಾಕಲಬ್ಬಿ ನಿರೂಪಿಸಿ ವಂದಿಸಿದರು. ಸಂಘಟನಾ ಕಾರ್ಯದರ್ಶಿ, ನಾಗರಾಜ ಮಜ್ಜಿಗುಡ್ಡ,ಪದಾಧಿಕಾರಿ ಶಂಕರ ಶಿಳ್ಳಿನ ಸನ್ಮಾನ ಕಾರ್ಯಕ್ರಮ ನಡೆಸಿಕೊಟ್ಟರು.

# ಸ್ವಚ್ಛತೆ ಅರಿವು ಕಾರ್ಯಕ್ರಮಕ್ಕೆ ಚಾಲನೆ

**ಬೆಳಗಾವಿ ವಾರ್ತೆ ನವಲಗುಂದ:** ಪಟ್ಟಣದ ಸುಕ್ಷೇತ್ರ ಸಂಸ್ಥಾನ ಪಂಚಗ್ರಹ ಹಿರೇಮಠದ ನೂತನ ಪಿಠಾಧಿಪತಿಗಳಾದ ಶ್ರೀ ವೀರಬಸವ ದೇವರ ಗುರುಪಟ್ಟಾಭಿಷೇಕದ ಅಂಗವಾಗಿ ಪುರಸಭೆಯ ಸಹಭಾಗಿತ್ವದಲ್ಲಿ ಸ್ವಚ್ಛತೆ ಕುರಿತು ಅರಿವು ಕಾರ್ಯಕ್ರಮಕ್ಕೆ ಶಾಸಕ ಎನ್ ಎಚ್ ಕೋನರಡ್ಡಿ ಚಾಲನೆ ನೀಡಿ ಮಾತನಾಡಿದರು.



ಇತ್ತೀಚೆಗೆ ಪುರಸಭೆ ಸದಸ್ಯರೊಂದಿಗೆ ಇಂದೋರ್ ನಗರದ ಸ್ವಚ್ಛತಾ ವ್ಯವಸ್ಥೆಯನ್ನು ಅವಲೋಕಿಸಿದ ಅನುಭವದಿಂದ, ಅದೇ ಮಾದರಿಯಲ್ಲಿ ನಮ್ಮ ನವಲಗುಂದವೂ ಮಾದರಿ ಸ್ವಚ್ಛ ನಗರವಾಗಿ ರೂಪುಗೊಳ್ಳಬೇಕು ಎಂಬ ಆಶಯವನ್ನು ವ್ಯಕ್ತಪಡಿಸಿದರು.

ಪಟ್ಟಣದ ಸಾರ್ವಜನಿಕರೆಲ್ಲರೂ ಮನೆಯ ಮುಂದೆ ಹೇಗೆ ಶ್ರದ್ಧೆಯಿಂದ ಸ್ವಚ್ಛತೆ ಕಾಪಾಡುತ್ತೇವೋ, ಅದೇ ಮನೋಭಾವದಿಂದ ನಮ್ಮ ಓಣಿಯನ್ನೂ, ನಮ್ಮ ಪಟ್ಟಣವನ್ನೂ ಸ್ವಚ್ಛವಾಗಿಟ್ಟುಕೊಳ್ಳುವುದು ಪ್ರತಿಯೊಬ್ಬ ನಾಗರಿಕನ ಕರ್ತವ್ಯ. ವಾರದಲ್ಲಿ ಕನಿಷ್ಠ ಒಂದು ದಿನ, ಪ್ರತಿಯೊಂದು ಓಣಿಯನ್ನು ಸ್ವಚ್ಛಗೊಳಿಸುವಂತೆ ಪುರಸಭೆ ಕ್ರಮ ಕೈಗೊಳ್ಳಬೇಕು ಹಾಗೂ ಈ ಕಾರ್ಯದಲ್ಲಿ ಸಾರ್ವಜನಿಕರೂ ಸಕ್ರಿಯವಾಗಿ ಕೈಜೋಡಿಸಬೇಕು ಎಂದು ಮನವಿ ಮಾಡಿದರು.

ಪಂಚಗೃಹ ಹಿರೇಮಠದ ನೂತನ ಪೀಠಾಧಿಕಾರಿ ವೀರಬಸವ ದೇವರು ಮಾತನಾಡಿ ಸ್ವಚ್ಛತೆ ಎಂಬುದು ಕೇವಲ ಅಭಿಯಾನವಲ್ಲ, ಅದು ನಮ್ಮ ಜೀವನ ಶೈಲಿ ಆಗಬೇಕು ? ಈ ಮನೋಭಾವವೇ ನಮ್ಮ ಪಟ್ಟಣವನ್ನು ಸುಂದರ, ಆರೋಗ್ಯಕರ ಮತ್ತು ಆದರ್ಶ ನಗರವನ್ನಾಗಿ ರೂಪಿಸುತ್ತದೆ ಎಂದರು.

ಜಾಗೃತಿ ಅರಿವು ಜಾಥಾ ಪಂಚಗೃಹ ಹಿರೇಮಠ ದಿಂದ ಗ್ರಾಮ ಚಾವಡಿ ಮಾರ್ಗವಾಗಿ ಲಿಂಗರಾಜ್ ವೃತ್ತ, ಗಾಂಧಿ ಮಾರುಕಟ್ಟೆ ಗಣಪತಿ ಗುಡಿ, ನಾಗಲಿಂಗಸ್ವಾಮಿ ಮಠದ ಮೂಲಕ ಸಾಗಿದ "ನಮ್ಮ ನಡೆ ಸ್ವಚ್ಛತೆ ಕಡೆ" ಜಾಥಾ, ಜನರಲ್ಲಿ ಸ್ವಚ್ಛತೆಯ ಬಗ್ಗೆ ಅರಿವು ಮೂಡಿಸುವಲ್ಲಿ ಮಹತ್ವದ ಹೆಜ್ಜೆಯಾಯಿತು.

ಪುರಸಭೆ ಮುಖ್ಯಾಧಿಕಾರಿ ಎಸ್ ಪಿ ಪೂಜಾರ, ನ್ಯಾಯವಾದಿ ವಿ ಪಿ ಪಾಟೀಲ, ಪುರಸಭೆ ಮಾಜಿ ಸದಸ್ಯರಾದ ಜೀವನ ಪವಾರ, ಮೋದಿನ ಶಿರೂರ, ಪ್ರಕಾಶ ಸಿಗ್ಲಿ, ಸುರೇಶ ಮೇಟಿ, ಹಣಮಂತ ವಾಲಿಕಾರ, ಮುಖಂಡರಾದ ಗಂಗಪ್ಪ ಹಳ್ಳದ,ಎಸ್ ಕೆ ದೋಟಿಕಲ, ಶಂಕ್ರಯ್ಯ ಸುಬಬೇದಾರಮಠ, ಶರ್ಮಾ ಹಿರೇಮಠ, ವೀರೇಶ ಜಾವುರ ಮಠ, ಶಿದ್ದಲಿಂಗಯ್ಯ ಹಿರೇಮಠ, ಅಡಿವೆಪ್ಪ ಶಿರಸಂಗಿ, ರವಿ ಬೆಂಡಿಗೇರಿ, ಆನಂದ ಹವಳಕೋಡ, ಮದರಸಾಬ ಉಗರಗೋಳ, ಸೇರಿದಂತೆ ಇಲಾಖೆ ಅಧಿಕಾರಿಗಳು, ಸಿಬ್ಬಂದಿಗಳು ಪೌರಕಾರ್ಮಿಕರು ಜಾಥಾದಲ್ಲಿ ಭಾಗವಹಿಸಿದ್ದರು.

# ವೈಶಾಖ ಮಹಿಮೆ ಉಪನ್ಯಾಸ



**ಬೆಳಗಾವಿ ವಾರ್ತೆ ಸತ್ತೂರು:** ದೇವರಿಗೆ ಪ್ರೀತಿಕರವಾದ, ಸಾಧಕರಿಗೆ ಪುಣ್ಯಪ್ರದವಾದ ಮಾಸಗಳಲ್ಲಿ ವೈಶಾಖಮಾಸವೂ ಒಂದು. ಧರ್ಮಕಾರ್ಯಗಳಿಗೆ, ಭಗವತ್ ಪ್ರೀತಿಕರವಾದ ಅನುಷ್ಠಾನಾದಿಗಳಿಗೆ ಪ್ರಶಸ್ತವಾದ "ಅಕ್ಷಯತೃತೀಯಾ" ಉತ್ಸವವು ಬರುವುದು ಇದೇ ಮಾಸದಲ್ಲಿ. ಗಂಗೆಯು ಜಾಹ್ನವಿಯಾಗಿ ಉದಯಿಸಿದ್ದು ಇದೇ ವೈಶಾಖ ಮಾಸದ ಶುದ್ಧ ಸಪ್ತಮಿ ದಿನದಂದು. ಪರಮ ಭಕ್ತನಾದ ಪ್ರಹ್ಲಾದನ ಮಾತನ್ನು ಸತ್ಯ ಮಾಡಲು ಪರಮಾತ್ಮ ನರಸಿಂಹ ದೇವರಾಗಿ ಬಂದಿದ್ದು, ದುಷ್ಟರ ನಿಗ್ರಹಕ್ಕಾಗಿ ಪರಶುರಾಮ ದೇವರು ಅವತರಿಸಿದ್ದು, ಇದೇ ವೈಶಾಖಮಾಸದಲ್ಲಿ.

ಸಕಲ ಸಜ್ಜನರ ಉದ್ಧಾರಕ್ಕಾಗಿ ಅವತರಿಸಿದ ವೇದವ್ಯಾಸದೇವರ ಜಯಂತಿಯೂ ವೈಶಾಖಮಾಸದಲ್ಲಿ ಬರುತ್ತದೆ ಎಂದು ಡಾ. ಪ್ರಮೋದ ಆಚಾರ್ಯ ಚಂದಿಯವರು ಅಭಿಪ್ರಾಯಪಟ್ಟರು

ಸತ್ತೂರಿನ ನಾರಾಯಣ ಪಾರಾಯಣ ಬಳಗದ ಆಶ್ರಯದಲ್ಲಿ ರಾಜಾಜಿನಗರದಲ್ಲಿರುವ ರಘೋತ್ತಮ ಅವಧಾನಿಯವರ ನಿವಾಸದಲ್ಲಿ ಜರುಗಿದ ವೈಶಾಖ ಮಾಸದ ಮಹತ್ವ ಕುರಿತು ಉಪನ್ಯಾಸದಲ್ಲಿ ಮಾತನಾಡುತ್ತ, ಈ ವೈಶಾಖ ಮಾಸದಲ್ಲಿ ಭಗವಂತನ ಮೂರು ಅವತಾರಗಳಾದ ಪರುಶುರಾಮ, ನರಸಿಂಹದೇವರು ಮತ್ತು ವೇದವ್ಯಾಸ ದೇವರ ಜಯಂತಿಗಳು ಆಚರಣೆಗಳು ಈ ವೈಶಾಖ ಮಾಸದ ವಿಶೇಷ. ನಾವೆಲ್ಲರೂ ಸ್ನಾನ, ದಾನ, ಯಾಗ, ಕ್ರಿಯಾ, ಭೋಗ, ಮುಂತಾದವುಗಳಿಗೂ ನಾನಾ ಧರ್ಮಗಳ ಸಾಧನೆಗೂ ಅತ್ಯಂತ ಅನುಕೂಲಕರವಾದ ಮಾಸವೇ ವೈಶಾಖ ಮಾಸ. ಸೂರ್ಯೋದಯಕ್ಕಿಂತಲೂ ಮೊದಲೇ ಸ್ನಾನ, ದೇವರಿಗೆ ಗಂಧಲೇಪನ, ಜಲ, ಛತ್ರ, ಪಾದುಕಾ ಇತ್ಯಾದಿಗಳ ದಾನ, ಅತ್ಯಂತ ಶ್ರೇಷ್ಠವೆಂದು ಸ್ಕಾಂದ ಪುರಾಣವು ನಮಗೆ ತಿಳಿಸುತ್ತದೆ.

ಇಂತಹ ಸಾಧಕರಿಗೆ ಪುಣ್ಯ ಸಂಪಾದನೆಗೆ ಅತ್ಯಂತ ಪ್ರಶಸ್ತವಾದ ಕಾಲವಾದ ವೈಶಾಖಮಾಸದಲ್ಲಿ ಯಥೋಚಿತವಾದ ಅನುಷ್ಠಾನ, ದಾನ ಧರ್ಮಗಳಿಂದ ಪರಮಾತ್ಮನನ್ನು ಮೆಚ್ಚಿಸಿ ಕೃತಾರ್ಥರಾಗೋಣ ಎಂದು ಲೌಕಿಕ ಉದಾರಣೆಗಳೊಂದಿಗೆ ಸುಂದರವಾಗಿ ವಿಶ್ಲೇಷಿಸಿದರು.

ಕೃಷ್ಣ ಹುನಗುಂದ, ಡಾ. ಶ್ರೀನಾಥ ಡಾ. ರವಿ ಧುಮ್ಮವಾಡ, ಕೇಶವ ಕುಲಕರ್ಣಿ, ಶ್ರೀನಿವಾಸ ಪಟ್ಟಣಕೊಡಿ, ರಂಗನಾಥ ಕಟ್ಟಿ ನಾಗೇಶ ನರಸಾಪುರ, ಆನಂದ ದೇಶಪಾಂಡೆ,ಅನಿಲ ಪುರೋಹಿತ, ಎಲ್ ವಿ ಜೋಶಿ, ಪಾಂಡುರಂಗ ಕುಲಕರ್ಣಿ, ಭೀಮಸೇನ್ ದಿಗ್ಗಾವಿ, ರಾಘವೇಂದ್ರ ಮುಂಡಗೋಡ ವಿಲಾಸ ಸಬ್ನೀಸ, ಹನುಮಂತ ರಮೇಶ ಅಣ್ಣಿಗೇರಿ ಉಪಸ್ಥಿತರಿದ್ದರು.

# ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ ಸಭೆಯಲ್ಲಿ ಸೂಚನೆ
## ಕುಡಿಯುವ ನೀರಿನ ಪೂರೈಕೆಗೆ ಪ್ರಥಮಾದ್ಯತೆ ನೀಡಿ: ಜಿಲ್ಲಾಧಿಕಾರಿ ಸಿ.ಎನ್.ಶ್ರೀಧರ್



**ಬೆಳಗಾವಿ ವಾರ್ತೆ ಗದಗ:** ಪ್ರಸ್ತುತ ಬೇಸಿಗೆ ದಿನಗಳಲ್ಲಿ ಜಿಲ್ಲೆಯಲ್ಲಿ ಕುಡಿಯುವ ನೀರಿನ ಪೂರೈಕೆಗೆ ಪ್ರಥಮಾದ್ಯತೆ ಮೇರೆಗೆ ಇಲಾಖಾಧಿಕಾರಿಗಳು ಕಾರ್ಯನಿರ್ವಹಿಸಬೇಕೆಂದು ಜಿಲ್ಲಾಧಿಕಾರಿ ಸಿ.ಎನ್.ಶ್ರೀಧರ್ ನಿರ್ದೇಶನ ನೀಡಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಮಂಗಳವಾರ ಜರುಗಿದ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗದಂತೆ ಯುದ್ಧೋಪಾದಿಯಲ್ಲಿ ಅಧಿಕಾರಿಗಳು ಕಾರ್ಯನಿರ್ವಹಿಸಬೇಕು. ಕುಡಿಯುವ ನೀರಿನ ಸಮಸ್ಯೆ ನೀಗಿಸಲು ಖಾಸಗಿ ಬೋರ್‌ವೆಲ್‌ಗಳ ಮೂಲಕ ನೀರು ಪೂರೈಸಲು ತಯಾರಿ ಮಾಡಿಟ್ಟುಕೊಳ್ಳಬೇಕು.ಈಗಿರುವ ಬೋರ್ ವೆಲ್‌ಗಳನ್ನು ರಿಪೇರಿ ಮಾಡಿಸಿ ಸುಸ್ಥಿತಿಯಲ್ಲಿರುವಂತೆ ನೋಡಿಕೊಳ್ಳಬೇಕು ಎಂದರು.

ಬೇಸಿಗೆ ದಿನಗಳಲ್ಲಿ ಬಿಸಿಲಿನ ತಾಪದಿಂದ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ ಸಾಧ್ಯತೆ ಇರುವುದರಿಂದ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸಬೇಕು. ಹಿರಿಯ ನಾಗರಿಕರು, ಗರ್ಭಿಣಿಯರು ಚಿಕ್ಕಮಕ್ಕಳಿಗೆ ಬಿಸಿಲಿನ ತಾಪಮಾನದಿಂದ ಆರೋಗ್ಯ ಸಮಸ್ಯೆ ಉಂಟಾಗದಂತೆ ಮುಂಜಾಗ್ರತೆ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಜಿಲ್ಲಾಧಿಕಾರಿಗಳು ಸೂಚಿಸಿದರು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಎಸ್.ಎಸ್. ನೀಲಗುಂದ ಅವರು ಮಾತನಾಡಿ ಬೇಸಿಗೆ ದಿನಗಳಲ್ಲಿ ಬಿಸಿಲಿನ ತಾಪ ಹೆಚ್ಚಾಗುವ ಸಂಭವವಿರುವುದರಿಂದ ಹೀಟ್‌ವೇವ್‌ನಿಂದ ಆರೋಗ್ಯ ಮೇಲೆ ದುಷ್ಪರಿಣಾಮ ಬೀರುವ ಸಾಧ್ಯತೆ ಇರುವುದರಿಂದ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಗ್ರಾಮೀಣ ಪ್ರದೇಶಗಳಲ್ಲಿ ಜಾಗೃತಿ ಕಾರ್ಯಕ್ರಮಗಳನ್ನು ಮಾಡಲಾಗುತ್ತಿದೆ ಎಂದರು.

ಜಿಲ್ಲೆಯ ಜಿಗಳೂರು ಗ್ರಾಮದ ಹತ್ತಿರ ನಿರ್ಮಿಸಿರುವ ಜಲಸಂಗ್ರಹಗಾರ ಕೆರೆಯ ಸದ್ಯ ನೀರಿನ ಸಂಗ್ರಹಣಾ ಸಾಮರ್ಥ್ಯ 2510 ಎಂ ಎಲ್ ಡಿ (0.08 ಟಿಎಂಸಿ) ಇದೆ. ಆ ನೀರು ರೋಣ, ಗಜೇಂದ್ರಗಡ ಮತ್ತು ನರೇಗಲ್ ಪಟ್ಟಣಗಳಿಗೆ 7 ತಿಂಗಳಿಗೆ ಸಾಕಾಗುತ್ತದೆ. ನವಿಲು ತೀರ್ಥ ಡ್ಯಾಂ ದಲ್ಲಿ ( ಲೈವ್ ಸ್ಟೋರೇಜ್ ) 8.259 ಟಿಎಂಸಿ ನೀರು, ಭದ್ರಾ ಡ್ಯಾಂ ದಲ್ಲಿ ( ಲೈವ್ ಸ್ಟೋರೇಜ್ ) 25.548 ಟಿಎಂಸಿ ನೀರು , ಶಿಂಗಟಾಲೂರ ಬ್ಯಾರೇಜ್ ದಲ್ಲಿ ( ಲೈವ್ ಸ್ಟೋರೇಜ್ ) 1.828 ಟಿಎಂಸಿ ನೀರು ಸಂಗ್ರಹವಿರುತ್ತದೆ. ಪ್ರಸ್ತುತ ಲಭ್ಯವಿರುವ ನೀರು ಮುಂದಿನ 72 ದಿನಗಳಿಗೆ ಸಾಕಾಗಲಿದೆ ಎಂದು ಸಂಬಂಧಿತ ಅಧಿಕಾರಿಗಳು ಸಭೆಗೆ ತಿಳಿಸಿದರು.

ಜಿಲ್ಲೆಯಲ್ಲಿ ಸದ್ಯಕ್ಕೆ ಕುಡಿಯುವ ನೀರಿನ ಸಮಸ್ಯೆ ಇರುವುದಿಲ್ಲ. ಮುಂಬರುವ ದಿನಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉದ್ಭವಿಸಬಹುದಾದ ಒಟ್ಟು 55 ಗ್ರಾಮಗಳನ್ನು ಮುಂಜಾಗ್ರತೆಗಾಗಿ ಗುರುತಿಸಲಾಗಿದೆ ಎಂದು ಗ್ರಾಮೀಣ ಕುಡಿಯುವ ನೀರು ಸರಬರಾಜು ವಿಭಾಗದ ಕಾರ್ಯನಿರ್ವಾಹಕ ಇಂಜನೀಯರ್ ಸಭೆಗೆ ತಿಳಿಸಿದರು. ನೀರಿನ ಸಮಸ್ಯೆ ಉದ್ಭವಿಸಬಹುದಾದ 9 ನಗರ ಸ್ಥಳೀಯ ಸಂಸ್ಥೆಗಳಲ್ಲಿನ 60 ವಾರ್ಡ್‌ಗಳನ್ನು ಮುಂಜಾಗ್ರತೆಗಾಗಿ ಗುರುತಿಸಲಾಗಿದೆ. ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿನ ಕುಡಿಯುವ ನೀರು ಕೊರತೆ ಆಗಬಹುದಾದ ವಾರ್ಡ್‌ಗಳಲ್ಲಿ ಒಪ್ಪಂದಕ್ಕಾಗಿ ಗುರುತಿಸಲಾದ ಹೆಚ್ಚಿನ ಇಳುವರಿ ನೀಡುವ 29 ಬೋರ್‌ವೆಲ್‌ಗಳನ್ನು ಗುರುತಿಸಲಾಗಿದೆ ಎಂದು ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಬಸನಗೌಡ ಕೋಟೂರ ಸಭೆಗೆ ತಿಳಿಸಿದರು.

ಈ ಸಂದರ್ಬದಲ್ಲಿ ಡಿವೈಎಸ್‌ಪಿ ಮಹಾಂತೇಶ ಸಜ್ಜನರ, ಅಪರ ಜಿಲ್ಲಾಧಿಕಾರಿ ಡಾ.ದುರಗೇಶ್ ಕೆ.ಆರ್, ಜಿ.ಪಂ. ಉಪಕಾರ್ಯದರ್ಶಿ ಸಿ.ಆರ್.ಮುಂಡರಗಿ, ಉಪ ಅರಣ್ಯ ಸಂರಕ್ಷಣಾಧಿಕಾರಿ ಸಂತೋಷ್ ಕೆ, ಉಪವಿಭಾಗಾಧಿಕಾರಿ ಗಂಗಪ್ಪ ಎಂ, ಗದಗ ಬೆಟಗೇರಿ ನಗರಸಭೆ ಪೌರಾಯುಕ್ತ ರಾಜಾರಾಮ್ ಪವಾರ, ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಆರ್.ಎಸ್.ಬುರುಡಿ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು ಹಾಜರಿದ್ದರು.

# ಶ್ರೀ ಭಗವಾನ ಬುದ್ಧ ಜಯಂತಿ ನಿಮಿತ್ತ ಪೂರ್ವಸಿದ್ಧತಾ ಸಭೆ
## ಜಯಂತಿಯನ್ನು ವ್ಯವಸ್ಥಿತವಾಗಿ ಆಚರಿಸಲು ಕ್ರಮ ವಹಿಸಿ: ಅಪರ ಜಿಲ್ಲಾಧಿಕಾರಿ ಡಾ.ದುರಗೇಶ್ ಕೆ.ಆರ್

**ಬೆಳಗಾವಿ ವಾರ್ತೆ ಗದಗ:** ಶ್ರೀ ಭಗವಾನ ಬುದ್ಧ ಜಯಂತಿಯನ್ನು ಮೇ 1 ರಂದು ನಗರದ ಜಿಲ್ಲಾಡಳಿತ ಭವನದ ಆಡಿಟೋರಿಯಂ ಹಾಲ್‌ದಲ್ಲಿ ವ್ಯವಸ್ಥಿತವಾಗಿ ಹಾಗೂ ಅಚ್ಚುಕಟ್ಟಾಗಿ ಆಚರಿಸಲು ಕ್ರಮ ವಹಿಸಬೇಕೆಂದು ಅಪರ ಜಿಲ್ಲಾಧಿಕಾರಿ ಡಾ.ದುರಗೇಶ್ ಕೆ.ಆರ್ ತಿಳಿಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಬುಧವಾರ ಭಗವಾನ ಬುದ್ಧ ಜಯಂತಿ ನಿಮಿತ್ತ ಜರುಗಿದ ಪೂರ್ವಸಿದ್ಧತಾ ಸಭೆಯ ಅಧ್ಯಕ್ಷತೆಯನ್ನು ವಹಿಸಿ ಅವರು ಮಾತನಾಡಿದರು.

ತಾಲೂಕು ಮಟ್ಟದಲ್ಲಿ ತಹಶೀಲ್ದಾರರ ಅಧ್ಯಕ್ಷತೆಯಲ್ಲಿ ಜಯಂತಿಯ ಆಚರಣೆಗೆ ಕ್ರಮ ವಹಿಸಬೇಕು. ಎಸ್.ಎಸ್.ಎಲ್.ಸಿ, ಪಿ.ಯುಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ಸಮಾಜದ ವಿದ್ಯಾರ್ಥಿಗಳಿಗೆ ಹಾಗೂ ವಿವಿಧ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ಸಮಾಜದ ಹಿರಿಯರಿಗೆ ಸನ್ಮಾನ ಕಾರ್ಯಕ್ರಮವು ಜರುಗಲಿದೆ. ಶಿಷ್ಟಾಚಾರದನ್ವಯ ಆಮಂತ್ರಣ ಮುದ್ರಣಕ್ಕೆ ಕ್ರಮ ವಹಿಸಬೇಕು. ಭಗವಾನ ಬುದ್ಧರ ಕುರಿತು ಆಳವಾಗಿ ಅಧ್ಯಯನ ಮಾಡಿದ ವರಿಂದ ಉಪನ್ಯಾಸ ಕಾರ್ಯಕ್ರಮವು ಜರುಗುವುದು. ಒಟ್ಟಾರೆಯಾಗಿ ಶ್ರೀ ಭಗವಾನ ಬುದ್ಧ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಲು ಕ್ರಮ ವಹಿಸಬೇಕೆಂದು ಅಪರ ಜಿಲ್ಲಾಧಿಕಾರಿ ಡಾ. ದುರಗೇಶ್ ಕೆ.ಆರ್. ನಿರ್ದೇಶನ ನೀಡಿದರು.

ಇದೇ ಸಂದರ್ಭದಲ್ಲಿ ಊಟೋಪಹಾರದ ವ್ಯವಸ್ಥೆ, ವೇದಿಕೆ ವ್ಯವಸ್ಥೆ, ಬ್ಯಾನರ



ಅಳವಡಿಕೆ ಕುರಿತು ಚರ್ಚಿಸಲಾಯಿತು.

ಈ ಸಭೆಯಲ್ಲಿ ಎಸ್.ಎನ್.ಬಳ್ಳಾರಿ, ಸತೀಶ ಹೂಲಿ, ಐ.ಕೆ. ಕಮ್ಮಾರ, ಅಂದಾನಪ್ಪ ವಿಭೂತಿ, ಸತೀಶ ಪಾಶಿ, ಅಶೋಕ ಬರಗುಂಡಿ, ಪ್ರಕಾಶ ಅಸುಂಡಿ, ಸರ್ಕಾರಿ ಪಾಲಿಟೆಕ್ನಿಕ್ ಪ್ರಾಚಾರ್ಯರು ರಮೇಶ ಮಾವಿನಕಾಯಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ರಾಜಕುಮಾರ ಸೊಪ್ಪಡ್ಲ, ವಿವಿಧ ಇಲಾಖೆಯ ಅಧಿಕಾರಿಗಳು ಹಾಜರಿದ್ದರು.

BELAGAVI VARTE Kannada Daily morning news paper Editor, Printer, Publisher and Owned by MAHESHWARI BHIMASHI BHARAMANNAVAR, 221/1A/1A/1A MAHALINGESHWAR NAGAR, NEAR BCA HOSTEL BELAGAVI KARNATAKA 591307. Printed at RAJADHANI PRINTING PRESS, CTS NO.1720/B1, SHOP NO.2 KELKARBAG, BELAGAVI, KARNATAKA - 590001